ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಸೆಪ್ಟೆಂಬರ್ 11, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 120 RNI : 27369/75


# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ವಿಶ್ವಸಂಸ್ಥೆ ವಿಸ್ತರಣೆಗೆ ಪ್ರಧಾನಿ ಆಗ್ರಹ




ನವದೆಹಲಿ, ಸೆ. 10 – ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ವಿಸ್ತರಣೆಗೆ ಬಲವಾಗಿ ಪ್ರತಿಪಾದಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಜಾಗತಿಕ ಸಂಸ್ಥೆಗಳು ಹೊಸ ವಾಸ್ತವಿಕತೆಯನ್ನು ಬಿಂಬಿಸಬೇಕು ಎಂದಿದ್ದಾರೆ.

ಜಿ20 ಶೃಂಗಸಭೆಗೆ ತೆರೆ ಎಳೆಯುವ ಸಮಯದಲ್ಲಿ ಈ ವಿಷಯ ಪ್ರಸ್ತಾಪಿಸಿರುವ ಪ್ರಧಾನಿ ಮೋದಿ, ನವೆಂಬರ್ ಅಂತ್ಯದ ವೇಳೆಗೆ ಜಿ20 ಸಮೂಹ ವರ್ಚುಯಲ್ ಮೂಲಕ ಸಭೆ ನಡೆಸಿ, ಶೃಂಗಸಭೆಯಲ್ಲಿ ವ್ಯಕ್ತ ವಾದ ಸಲಹೆಗಳು ಹಾಗೂ ತೆಗೆದುಕೊಂಡ ನಿರ್ಧಾರಗಳಲ್ಲಿ ಆಗಿರುವ ಪ್ರಗತಿಯನ್ನು ಪರಿಶೀಲಿಸಬೇಕು ಎಂದು ಸಲಹೆ ನೀಡಿದ್ದಾರೆ.

ಇದೇ ವೇಳೆ ಪ್ರಧಾನಿ ಮೋದಿ ಅವರು, ಮುಂದಿನ ಜಿ20 ಶೃಂಗಸಭೆ ನಿರ್ವಹಿಸಲು ಬ್ರೆಜಿಲ್‌ಗೆ ಗೌರವ ದಂಡವನ್ನು ಹಸ್ತಾಂತರಿಸಿದರು.

### ಜಿ20 ಶೃಂಗಸಭೆಗೆ ತೆರೆ

ಜಾಗತಿಕ ಸಂಸ್ಥೆಗಳಲ್ಲಿ ಸುಧಾರಣೆಯಾಗಬೇಕು ಎಂಬ ಪ್ರಧಾನ ಮಂತ್ರಿ ಒತ್ತಾಯವನ್ನು ಬೆಂಬಲಿಸಿರುವ ಬ್ರೆಜಿಲ್ ಅಧ್ಯಕ್ಷ ಲುಲಾ ಡಸಿಲ್ವ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಶಾಶ್ವತ ಹಾಗೂ ಶಾಶ್ವತೇತರ ಸದಸ್ಯತ್ವ ನೀಡಬೇಕು ಎಂದು ಹೇಳಿದರು.

ಜಿ20 ಶೃಂಗಸಭೆ ವೇಳೆ 'ಒಂದೇ ಭವಿಷ್ಯ' ಸಮಾವೇಶದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ವಿಶ್ವ ಸಂಸ್ಥೆ ಸೇರಿದಂತೆ ಜಾಗತಿಕ ಸಂಸ್ಥೆಗಳಲ್ಲಿ ಸುಧಾರಣೆ ಆಗಬೇಕಿದೆ ಎಂದರು.

ಈಗಿನ ವಾಸ್ತವಿಕತೆಯನ್ನು (2ನೇ ಪುಟಕ್ಕೆ)

### ಕೆನಡಾದಲ್ಲಿ ಭಾರತ ವಿರೋಧಿ ಶಕ್ತಿಗಳ ಬಗ್ಗೆ ಪ್ರಧಾನಿ ಕಳವಳ

ನವದೆಹಲಿ, ಸೆ 10 – ಕೆನಡಾದಲ್ಲಿ ಭಾರತ ವಿರೋಧಿ ತೀವ್ರವಾದಿ ಶಕ್ತಿಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡ್ಯೂ ಬಳಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಗಂಭೀರ ಕಳವಳ ವ್ಯಕ್ತಪಡಿಸಿದ್ದಾರೆ.

ಕೆನಡಾದಲ್ಲಿ ಭಾರತ ವಿರೋಧಿ ಶಕ್ತಿಗಳು ಭಾರತದ ರಾಯಭಾರಿಗಳ ಮೇಲೆ ಹಿಂಸಾಚಾರಕ್ಕೆ ಪ್ರಚೋದನೆ ನೀಡುತ್ತಿವೆ ಹಾಗೂ ಅಲ್ಲಿನ ಭಾರತೀಯ ಸಮುದಾಯಕ್ಕೆ ಬೆದರಿಕೆ ಹಾಕುತ್ತಿವೆ ಎಂದು ಪ್ರಧಾನಿ ಹೇಳಿದ್ದಾರೆ.

## ಇಂದು ಖಾಸಗಿ ಸಾರಿಗೆ ಸಂಸ್ಥೆಗಳಿಂದ ಮುಷ್ಕರ

ಬೆಂಗಳೂರು, ಸೆ.10- ಖಾಸಗಿ ಸಾರಿಗೆ ಸಂಸ್ಥೆಗಳ ಒಕ್ಕೂಟವು ಸೆ.11ರಂದು ಖಾಸಗಿ ಸಾರಿಗೆ ಯನ್ನು ಬಂದ್ ಮಾಡಲು ನಿರ್ಧರಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುವ ಸಾಧ್ಯತೆ ಇದೆ. ಟ್ಯಾಕ್ಸಿ, ಆಟೋ, ಮ್ಯಾಕ್ಸಿಕ್ಯಾಬ್, ಖಾಸಗಿ ಬಸ್‌ಗಳ ಚಾಲಕರು ಮತ್ತು ಮಾಲೀಕರು 30 ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬಂದ್‌ಗೆ ಕರೆ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ (2ನೇ ಪುಟಕ್ಕೆ)




## ಭವಿಷ್ಯಕ್ಕೆ ಮಠಗಳು ಅಗತ್ಯ



ಗೋಕರ್ಣ, ಸೆ.10- ಯುವ ಮನಸ್ಸುಗಳನ್ನು ಗುರುತ್ವಾಕರ್ಷಣೆಗೆ ಗುರಿ ಪಡಿಸಿದಾಗ ಇಡೀ ಯುವ ಚೇತನ ಸತ್ಪಥದಲ್ಲಿ ಸುತ್ತುತ್ತಿರುತ್ತದೆ ಎಂದು ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ನುಡಿದರು.

ಅಶೋಕೆಯ ಶ್ರೀ ವಿಷ್ಣುಗುಪ್ತ ವಿಶ್ವವಿದ್ಯಾಪೀಠದ ಆವರಣದಲ್ಲಿ ಚಾತುರ್ಮಾಸ್ಯ ಸಂದರ್ಭದಲ್ಲಿ ಹಮ್ಮಿಕೊಂಡಿದ್ದ ಬೃಹತ್ ಯುವ ಸಮಾವೇಶದಲ್ಲಿ ಅವರು ಮಾತನಾಡಿದರು.

ಮಠದ ಭವಿಷ್ಯಕ್ಕೆ ಯುವಕರು ಬೇಕು. ಯುವಕರ ಭವಿಷ್ಯಕ್ಕಾಗಿಯೂ ಮಠಬೇಕು. ಬಾಲ್ಯದಲ್ಲೇ ಮಕ್ಕಳನ್ನು ಮಠಕ್ಕೆ ಕರೆತಂದು, ನಮ್ಮ ಆಚಾರ ವಿಚಾರಗಳು, ಸಂಸ್ಕೃತಿ ಪರಂಪರೆ, ಆಹಾರ ವಿಹಾರಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಆಗಬೇಕು (2ನೇ ಪುಟಕ್ಕೆ)


|| ಶ್ರೀ ಬಸವೇಶ್ವರ ಪ್ರಸನ್ನ ||
ಹೊಯ್ಸಳ ಕಾಲದ ಶಿಲ್ಪಕಲೆಯಿಂದ ಕೂಡಿದ ಐತಿಹಾಸಿಕ
ಶ್ರೀ ಕ್ಷೇತ್ರ ಆನೆಕೊಂಡ ಬಸವೇಶ್ವರ ದೇವಸ್ಥಾನದಲ್ಲಿ
ದಿ. 11.09.2023ರ ಶ್ರಾವಣ ಮಾಸದ ಕಡೇ ಸೋಮವಾರದಂದು
ಶ್ರೀ ಬಸವೇಶ್ವರ ಮತ್ತು ನೀಲಾನಹಳ್ಳಿ ಶ್ರೀ ಆಂಜನೇಯ ಸ್ವಾಮಿ ಮತ್ತು ನಿಟುವಳ್ಳಿ
ಶ್ರೀ ದುರ್ಗಾಂಬಿಕಾ ದೇವಿ ಹಾಗೂ ಸುತ್ತಮುತ್ತಲಿನ ಗ್ರಾಮದ ದೇವರಗಳನ್ನೊಳಗೂಡಿ
ಸಂಜೆ 4.00 ಗಂಟೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ
ಮೆರವಣಿಗೆ ಮೂಲಕ ಸಂಚರಿಸಿ, ಸಂಜೆ 6.00 ಗಂಟೆಗೆ ನಡೆಯುವ
ಕಾರಣಿಕ ಮಹೋತ್ಸವಕ್ಕೆ
ಸರ್ವ ಭಕ್ತಾದಿಗಳಿಗೆ ಭಕ್ತಿಪೂರ್ವಕ ಸುಸ್ವಾಗತ
ಆಡಳಿತ ಮಂಡಳಿ, ಶ್ರೀ ಬಸವೇಶ್ವರ ಮುಜರಾಯಿ ಸಮಿತಿ (ರಿ), ಶ್ರೀ ಕ್ಷೇತ್ರ ಆನೆಕೊಂಡ ಮತ್ತು ಗ್ರಾಮಸ್ಥರು




ಈ ಕಾರಣಿಕ ಮಹೋತ್ಸವದಲ್ಲಿ ಭಾಗವಹಿಸುತ್ತಿರುವ
ಸರ್ವ ಭಕ್ತಾದಿಗಳಿಗೆ ಹಾರ್ದಿಕ ಸ್ವಾಗತ... ಸುಸ್ವಾಗತ...
ಡಾ|| ಶಾಮನೂರು ಶಿವಶಂಕರಪ್ಪ
ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ.
ಶಾಮನೂರು ಮಲ್ಲಿಕಾರ್ಜುನ್
ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ದಾವಣಗೆರೆ.


## ಗೌಡರ ಉಚ್ಚಾಟನೆಗೆ ರೇಣುಕಾಚಾರ್ಯ ಖಂಡನೆ



ದಾವಣಗೆರೆ, ಸೆ.10- ಯಾವುದೇ ನೋಟೀಸ್ ನೀಡದೆ, ಮಾಜಿ ಶಾಸಕ ಟಿ.ಗುರುಸಿದ್ದನಗೌಡ ಹಾಗೂ ಅವರ ಕುಟುಂಬದವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿರುವುದು ಖಂಡನೀಯ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದ್ದಾರೆ.

ನಗರದ ಸಿದ್ದವೀರಪ್ಪ ಬಡಾವಣೆಯಲ್ಲಿರುವ ಮಾಜಿ ಶಾಸಕ ಗುರುಸಿದ್ದನಗೌಡ ಅವರ ನಿವಾಸಕ್ಕೆ ಭಾನುವಾರ ಭೇಟಿ ನೀಡಿದ ರೇಣುಕಾಚಾರ್ಯ, ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ಚುನಾವಣೆಯ ಸಂದರ್ಭದಲ್ಲಿ ಗುರುಸಿದ್ದನಗೌಡರು ಸಾಕಷ್ಟು ಓಟಾಟ ಮಾಡಿ ಪಕ್ಷ ಕಟ್ಟಿದ್ದಾರೆ. ಅಭ್ಯರ್ಥಿ ವಿರುದ್ಧ ಕೆಲಸ (2ನೇ ಪುಟಕ್ಕೆ)

## ಪಕ್ಷದಲ್ಲಿಯೇ ಇರಲು ಮನವಿ ಮಾಡಿದ್ದಾರೆ : ಗುರುಸಿದ್ದನಗೌಡ್ರು

ದಾವಣಗೆರೆ, ಸೆ.10- ಬಿಜೆಪಿ ಜಿಲ್ಲಾ ಘಟಕದ ಕೆಲವು ನಾಯಕರು ತಮ್ಮ ಅಧಿಕಾರ ವ್ಯಾಪ್ತಿ ಮೀರಿ, ನಿಯಮಬಾಹೀರವಾಗಿ ತಮ್ಮನ್ನು ಉಚ್ಚಾಟಿಸಿರುವ ಬಗ್ಗೆ ಪಕ್ಷದ ಬಿಜೆಪಿ ರಾಜ್ಯ ಸಂಘಟನಾ ಕಾರ್ಯದರ್ಶಿ ರಾಜೇಶ್ ಅವರ ಗಮನಕ್ಕೆ ತರಲಾಗಿದೆ. ಅವರು ಈ ಕುರಿತು ಜಿಲ್ಲಾಧ್ಯಕ್ಷರಿಗೆ ವಿವರಣೆ ಕೇಳಿ ಕ್ರಮ ಕೈಗೊಳ್ಳಲಾಗುವುದು. ಆಗಿರುವ ಪ್ರಮಾದವನ್ನು ಮನ್ನಿಸಿ, ನೀವು ಪಕ್ಷದಲ್ಲಿ ಮುಂದುವರೆಯಬೇಕು ಎಂದು ಮನವಿ ಮಾಡಿದ್ದಾರೆ ಎಂದು ಮಾಜಿ ಶಾಸಕ ಗುರುಸಿದ್ದನಗೌಡ್ರ ಹೇಳಿದ್ದಾರೆ.

ಗುರುಸಿದ್ದನಗೌಡ್ರ ಅವರ ಪುತ್ರ ಡಾ. ರವಿಕುಮಾರ್ ಮಾತನಾಡಿ, ತಾವು ದಾವಣಗೆರೆ ಲೋಕಸಭೆ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ಈ ವಿಚಾರವಾಗಿ ಬಿಜೆಪಿ ಕೈಗೊಳ್ಳುವ ಯಾವುದೇ ನಿರ್ಧಾರಕ್ಕೂ ಬದ್ಧ. ಬಿಜೆಪಿ ಪಕ್ಷಕ್ಕೆ ತಮ್ಮ ನಿಷ್ಠೆ ಅಚಲ ಎಂದರು.

### ಗೋಣಿವಾಡದ ಬ್ಯಾಡಗಿ ರೇಣುಕಮ್ಮ ನಿಧನ




ದಾವಣಗೆರೆ ವಿನಾಯಕ ಬಡಾವಣೆ, ವಿದ್ಯಾನಗರ, 2ನೇಮೇನ್, 2ನೇ ಕ್ರಾಸ್ ವಾಸಿ
ದಿ. ಬ್ಯಾಡಗಿ ಪಂಚಾಕ್ಷರಪ್ಪನವರ ಧರ್ಮಪತ್ನಿ
**ಶ್ರೀಮತಿ ಗೋಣಿವಾಡದ ಬ್ಯಾಡಗಿ ರೇಣುಕಮ್ಮ**
ಇವರು ದಿನಾಂಕ 10.09.2023ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 80 ವರ್ಷ ವಯಸ್ಸಾಗಿತ್ತು.
ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.09.2023ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ದಾವಣಗೆರೆಯ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರೇವರಿಸಲಾಗುವುದು.
**ದುಃಖತಪ್ತ ಕುಟುಂಬ ವರ್ಗ : ಮೊ : 74111 03322**

### ಕಾಮನಹಳ್ಳಿ ಎನ್.ಕೆ. ಚನ್ನಬಸಪ್ಪ ನಾಗರಕಟ್ಟೆ ನಿಧನ



ದಾವಣಗೆರೆ ತಾಲ್ಲೂಕು ನಾಗರಕಟ್ಟೆ ಗ್ರಾಮದ ವಾಸಿ
ಮಾಜಿ ಛೇರ್ಮನ್
**ಕಾಮನಹಳ್ಳಿ ಎನ್.ಕೆ. ಚನ್ನಬಸಪ್ಪ**
ಇವರು ದಿನಾಂಕ 10.09.2023ರ ಭಾನುವಾರ ರಾತ್ರಿ 10.45 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 78 ವರ್ಷ ವಯಸ್ಸಾಗಿತ್ತು.
ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.09.2023ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ದಾವಣಗೆರೆ ತಾಲ್ಲೂಕು ನಾಗರಕಟ್ಟೆ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.
ದುಃಖ ತಪ್ತ ಕುಟುಂಬ ವರ್ಗ :
ಎನ್.ಸಿ. ಈಶಪ್ಪ, ಅನುಸೂಯಮ್ಮ ಎನ್.ಸಿ.
ಶಿವಲಿಂಗಪ್ಪ ಎನ್.ಸಿ., ಬಸವರಾಜಪ್ಪ ಎನ್.ಸಿ.
ಮೊಮ್ಮಕ್ಕಳು, ಕುಟುಂಬ ವರ್ಗ ಹಾಗೂ ಬಂಧು ಮಿತ್ರರು.
ಮೊ : 97429 96776, 86605 50241, 90605 03248

### ಶ್ರೀ ಬಳ್ಳಾರಿ ಷಣ್ಮುಖಪ್ಪ ನಿಧನ



ದಾವಣಗೆರೆ ಕುರುಬರಕೇರಿ ವಾಸಿ
**ಶ್ರೀ ಬಳ್ಳಾರಿ ಷಣ್ಮುಖಪ್ಪನವರು**

- ಶ್ರೀ ಬೀರಲಿಂಗೇಶ್ವರ ಎಂಟರ್ ಪ್ರೈಸಸ್ ಮಾಲೀಕರು, ಎಪಿಎಂಸಿ ಯಾರ್ಡ್, 'ಬಿ' ಬ್ಲಾಕ್, ದಾವಣಗೆರೆ
- ಜಿಲ್ಲಾ ಕುರುಬ ಸಂಘದ ಉಪಾಧ್ಯಕ್ಷರು
- ನಗರ ಕುರುಬ ಸಂಘದ ಕಾರ್ಯದರ್ಶಿಗಳು
- ಕನಕ ಪಟ್ಟಣ ಸಹಕಾರಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷರು
- ಶ್ರೀ ಬೀರೇಶ್ವರ ಜಾಗದ ಅಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷರು
- ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನ ಟ್ರಸ್ಟ್‌ನ ಗೌರವಾಧ್ಯಕ್ಷರು
- ಶ್ರೀ ಬೀರೇಶ್ವರ ಭವನದ ಗೌರವಾಧ್ಯಕ್ಷರು
- ಶ್ರೀ ಮೇಡ್ಲೇರಿ ಬೀರಲಿಂಗೇಶ್ವರ ದೇವಸ್ಥಾನ ಮತ್ತು ಕಲ್ಯಾಣ ಮಂಟಪದ ಮಾಜಿ ಕಾರ್ಯದರ್ಶಿಗಳು
- ಕುರುಬರಕೇರಿಯ ಗಣಪತಿ ಗೆಳೆಯರ ಬಳಗದ ಅಧ್ಯಕ್ಷರು ಮತ್ತು ಕಾಂಗ್ರೆಸ್ ಮುಖಂಡರು.

ಇವರು, ದಿನಾಂಕ 10.09.2023ರ ಭಾನುವಾರ ಬೆಳಿಗ್ಗೆ 11.16 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 67 ವರ್ಷ ವಯಸ್ಸಾಗಿತ್ತು. ಪತ್ನಿ, ಐವರು ಪುತ್ರಿಯರು, ಮೂವರು ಪುತ್ರರು, ಸಹೋದರ, ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ. ಶ್ರೀಯುತರ ಅಂತ್ಯಕ್ರಿಯೆಯನ್ನು ದಿನಾಂಕ 11.09.2023ರ ಸೋಮವಾರ ಬೆಳಿಗ್ಗೆ 11.30 ಕ್ಕೆ ಗಾಂಧಿನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

– ದುಃಖತಪ್ತ ಕುಟುಂಬ ವರ್ಗದವರು

### ಮೋದಿ ನೀತಿಗಳಿಂದ ಶ್ರೀಮಂತರಿಗಷ್ಟೇ ಲಾಭ

ಜೈಪುರ, ಸೆ.10- ಪ್ರಧಾನಿ ಅವರು ವಿದೇಶ ಪ್ರವಾಸ ಹೋಗುತ್ತಾರೆ ಮತ್ತು ಅಲ್ಲಿ ತಮ್ಮ ಉದ್ಯಮಿ ಸ್ನೇಹಿತರಿಗಾಗಿ ಒಪ್ಪಂದಗಳನ್ನು ಮಾಡಿಕೊಂಡು ಬರುತ್ತಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ (3ನೇ ಪುಟಕ್ಕೆ)


GM Group of Institution
Davanagere.



ಬಸ್ ಚಾಲಕರು ಬೇಕಾಗಿದ್ದಾರೆ

ಹೆವಿ ಲೈಸೆನ್ಸ್‌ವುಳ್ಳ ಅನುಭವಿ ಬಸ್ ಚಾಲಕರು ದಾವಣಗೆರೆ ಮತ್ತು ಹರಿಹರದಿಂದ ಜಿ.ಎಂ.ಐ.ಟಿ ಕಾಲೇಜಿಗೆ ಕರೆತರಲು ಜವಾಬ್ದಾರಿಯುತವಾದ 10 ಬಸ್ ಚಾಲಕರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು. ಆಸಕ್ತ ಚಾಲಕರು ತಮ್ಮ ಇತ್ತೀಚಿನ ಭಾವಚಿತ್ರ, ಆಧಾರ ಕಾರ್ಡ್, ಹೆವಿ ಲೈಸೆನ್ಸ್ ಪ್ರತಿಗಳೊಂದಿಗೆ ಈ ನೇರ ಸಂದರ್ಶನಕ್ಕೆ ಹಾಜರಾಗಿ.

86187-85510
84948-84444


### ಭಾವಪೂರ್ಣ ಶ್ರದ್ಧಾಂಜಲಿ



ನಮ್ಮ ಸಂಸ್ಥೆಯ ಗೌರವಾಧ್ಯಕ್ಷರಾದ
**ಶ್ರೀ ಬಳ್ಳಾರಿ ಷಣ್ಮುಖಪ್ಪ**
ಇವರು, ದಿನಾಂಕ 10.09.2023ರಂದು ನಿಧನರಾಗಿದ್ದು ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ನಗರ ಕುರುಬರ ಸಂಘ, ದಾವಣಗೆರೆ.
✦ ಶ್ರೀ ಬೀರೇಶ್ವರ ಭವನ,
ಶ್ರೀಮತಿ ಈರಮ್ಮ ಹಾಲಮ್ಮ ಮಾಗೋಡು ಹನುಮಂತಪ್ಪ ಕಲ್ಯಾಣ ಮಂಟಪ, ದಾವಣಗೆರೆ.
✦ ಹೆಚ್.ಬಿ. ಗೋಣೆಪ್ಪ, ಅಧ್ಯಕ್ಷರು ✦ ಬಿ.ಹೆಚ್. ಪರಶುರಾಮಪ್ಪ, ಉಪಾಧ್ಯಕ್ಷರು
✦ ಎಸ್.ಎಲ್. ಆನಂದಪ್ಪ, ಕಾರ್ಯದರ್ಶಿ, ಬಿ.ರಮೇಶ್ (ಪಿಜೆ), ಖಜಾಂಚಿ
ಸದಸ್ಯರುಗಳು : ✦ ಶ್ರೀಮತಿ ಕೆ.ಬಿ. ಶೈಲಶ್ರೀ ✦ ಮಾಗೋಡು ಚನ್ನಪ್ಪ
✦ ಕೆ. ವಿವೇಕ್ ✦ ಬಿ. ರೇವಣ್ಣ ✦ ಜಿ.ಟಿ. ಪರಮೇಶ್ ✦ ಹುಲಿಕಟ್ಟಿ ಸಿದ್ದೇಶ್
✦ ಹೆಚ್.ಎನ್.ಪ್ರಕಾಶ್ ✦ ಬಳ್ಳಾರಿ ಜಯ್ಯಪ್ಪ
✦ ಹೆಚ್.ಎಂ. ಮಂಜುನಾಥ್ ಹಾಗೂ ✦ ಕೆ.ಎನ್.ತಿರುಕಪ್ಪ, ವ್ಯವಸ್ಥಾಪಕರು.

# ಭವಿಷ್ಯಕ್ಕೆ ಮಠಗಳು ಅಗತ್ಯ

**(1ನೇ ಪುಟದಿಂದ)** ಎಂದು ಶ್ರೀಗಳು ನುಡಿದರು. ಮಠಮಾನ್ಯಗಳು ಬೀರುವ ಒಳ್ಳೆಯ ಪ್ರಭಾವವನ್ನು ಮಕ್ಕಳ ಮೇಲೆ ಬೇರೆ ಯಾರೂ ಬೀರಲು ಸಾಧ್ಯವಿಲ್ಲ. ವಿಜ್ಞಾನ ಹಾಗೂ ಅಧ್ಯಾತ್ಮ ಒಂದೇ ನಾಣ್ಯದ ಎರಡು ಮುಖಗಳು. ವಿಜ್ಞಾನಿಗೂ ಶ್ರದ್ಧೆ ಇದೆ, ಅಜ್ಞಾನಿಗೂ ಶ್ರದ್ಧೆ ಇದೆ. ಅರೆಜ್ಞಾನಿಗೆ ಮಾತ್ರ ಶ್ರದ್ಧೆ ಇರುವುದಿಲ್ಲ. ಗುರುಪೀಠದ ಮೇಲೆ ನಿಷ್ಠೆ-ಶ್ರದ್ಧೆಯಿಂದ ಸೇವೆ ಮಾಡಿದರೆ ಅದರ ಫಲ ನಿರೀಕ್ಷೆಗೂ ಮೀರಿದ್ದು ಎಂದು ಬಣ್ಣಿಸಿದರು.

ಶ್ರೀಮಠದಿಂದ ವಿಷ್ಣುಗುಪ್ತ ಸನ್ಮಾನ ಸ್ವೀಕರಿಸಿದ ಇಸ್ರೋದ ಬಾಹ್ಯಾಕಾಶ ವಿಭಾಗದ ಹಿರಿಯ ವಿಜ್ಞಾನಿ ಡಾ. ರಾಧಾಕೃಷ್ಣ ವಾಟೆಡ್ಕ, ನನಗೆ ಸಂದ ಗೌರವ ಇಸ್ರೋಗೆ ಸಮರ್ಪಣೆ ಎಂದು ಹೇಳಿದರು.

ಯುವಕರು ಕುತೂಹಲದ ಬೆನ್ನು ಹತ್ತಿದಾಗ ಉತ್ತಮ ಸಾಧನೆ ಮಾಡಲು ಸಾಧ್ಯ. ನಮ್ಮ ಖಗೋಳ ಯೋಜನೆಗಳು, ನಕ್ಷತ್ರಗಳ ಬಗೆಗಿನ ಅಧ್ಯಯನ ಹೀಗೆ ಹಲವು ಕುತೂಹಲಕಾರಿ ಅಂಶಗಳು ಮನುಷ್ಯನ ಜೀವನಕ್ಕೆ ಒಳಿತಾಗುವ ತಂತ್ರಜ್ಞಾನಗಳ ಆವಿಷ್ಕಾರಕ್ಕೂ ಕಾರಣವಾಗಿದೆ ಎಂದು ಹೇಳಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರ್ನಹಳ್ಳಿ ಮಾತನಾಡಿ, ಸನಾತನ ಧರ್ಮದ ಬಗ್ಗೆ ಆತ್ಮಾಭಿಮಾನ ಎಲ್ಲ ಭಾರತೀಯರಲ್ಲಿ ಇರಬೇಕು. ಸನಾತನ ಧರ್ಮವನ್ನು ನಿರ್ಮೂಲನೆ ಮಾಡಲು ಹೊರಟವರು ಸರ್ವನಾಶವಾದ ಉದಾಹರಣೆಗಳು ಇತಿಹಾಸದುದ್ದಕ್ಕೂ ಇವೆ. ಸನಾತನ ಧರ್ಮವನ್ನು ಹೀಗಳೆಯುವುದು ಪಾಶ್ಚಾತ್ಯ ದಾಸ್ಯದ ಸಂಕೇತ ಎಂದರು.

ಹವ್ಯಕ ಮಹಾಮಂಡಲದ ಅಧ್ಯಕ್ಷ ಮೋಹನ ಭಾಸ್ಕರ ಹೆಗಡೆ ಮಾತನಾಡಿದರು. ಇದೇ ಸಂದರ್ಭದಲ್ಲಿ ಹಿರಿಯ ಕಲಾವಿದ ನೀರ್ನಳ್ಳಿ ಗಣಪತಿ ಅವರಿಗೆ ಉಂಡೆಮನೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

# ವಿಶೇಷ ಪ್ರತಿಭೆ ಮೂಲಕ ಗಮನ ಸೆಳೆದ ಜಿ.ಬೇವಿನಹಳ್ಳಿಯ ಪುಟ್ಟ ಬಾಲಕಿ 'ಅನ್ವಿತಾ'

ಮಲೇಬೆನ್ನೂರು, ಸೆ.10- ತನ್ನಲ್ಲಿರುವ ವಿಶೇಷ ಪ್ರತಿಭೆ ಮೂಲಕ ಎಲ್ಲರ ಗಮನ ಸೆಳೆದಿರುವ ಜಿ.ಬೇವಿನಹಳ್ಳಿಯ 'ಸಿ' ಅಂಗನವಾಡಿ ಕೇಂದ್ರದ 5 ವರ್ಷದ ಅನ್ವಿತಾ ಇದುವರೆಗೆ 10ಕ್ಕೂ ಹೆಚ್ಚು ಪ್ರಶಸ್ತಿ ಪಡೆದಿದ್ದಾಳೆ. ಜಿ.ಬೇವಿನಹಳ್ಳಿಯ ಸುಮಾ ಮತ್ತು ನಟರಾಜ್ ಇವರ ಮಗಳಾದ ಅನ್ವಿತಾ, ಮೊದಲಿನಿಂದಲೂ ಕಲಿಕೆಯಲ್ಲಿ ಬಹಳ ಶ್ರದ್ಧೆ ಹೊಂದಿದ್ದು, ಭಾಷಣ ಮತ್ತು ಚಿತ್ರಕಲೆಯಲ್ಲಿ ಇವಳು ಎತ್ತಿದ ಕೈ.

'ಅ' ಯಿಂದ 'ಳ' ವರೆಗೂ ಕನ್ನಡ ವರ್ಣ ಮಾಲೆ, 'ಕ' ಯಿಂದ 'ಳ'ವರೆಗೂ ಒತ್ತಕ್ಷರಗಳು, 'A' ಯಿಂದ 'Z' ವರೆಗೆ ಉಲ್ಟಾ ಇಂಗ್ಲಿಷ್ ವರ್ಣಮಾಲೆ ಹೇಳುತ್ತಾರೆ. 1 ರಿಂದ 500 ಕ್ಕೂ ಅಧಿಕ ಸಂಖ್ಯೆ ಬರೆಯುತ್ತಾಳೆ ಮತ್ತು ಗುರುತಿಸುತ್ತಾಳೆ. 10ಕ್ಕಿಂತ ಹೆಚ್ಚು ಆಕಾರಗಳು, 20ಕ್ಕೂ ಹೆಚ್ಚು ಕಂಪ್ಯೂಟರ್ ಭಾಗಗಳನ್ನು ಗುರುತಿಸುವ ಇವಳು, 15ಕ್ಕೂ ಹೆಚ್ಚು ರಾಷ್ಟ್ರೀಯ ಚಿಹ್ನೆಗಳನ್ನು ಹೇಳುತ್ತಾಳೆ.



1 ರೂ. ಯಿಂದ 2000 ರೂ. ವರೆಗೂ ರೂಪಾಯಿ ಚಿಹ್ನೆಗಳನ್ನು ಗುರುತಿಸುವ ಅನ್ವಿತಾ, ಕಾಡು ಪ್ರಾಣಿಗಳು, ಸಾಕು ಪ್ರಾಣಿಗಳು ಮತ್ತು ಮನುಷ್ಯನ ದೇಹದ ಎಲ್ಲಾ ಭಾಗಗಳ ಹೆಸರನ್ನೂ ಹೇಳುತ್ತಾಳೆ. 15ಕ್ಕೂ ಅಧಿಕ ಬಣ್ಣಗಳ ಹೆಸರು ಹೇಳುವ ಇವಳು, ಒಂದರಿಂದ ನೂರರವರೆಗೆ ರೋಮನ್ ಸಂಖ್ಯೆಗಳನ್ನು ಹೇಳಿ, ಬರೆಯುತ್ತಾಳೆ.

'ಅ' ಯಿಂದ 'ಳ' ವರೆಗೆ ಹಿಂದಿ ವರ್ಣಮಾಲೆ ಬರೆಯುತ್ತಾಳೆ. 15 ಜಿಲ್ಲೆಗಳ ಹೆಸರು ಹೇಳುವ ಈ ಪುಟ್ಟ ಬಾಲಕಿ, 50 ಕ್ಕೂ ಹೆಚ್ಚು ಜನರಲ್ ಪ್ರಶ್ನೆಗೆ ಉತ್ತರ ಹಾಗೂ ಇಂಗ್ಲಿಷ್ ಮತ್ತು ಕನ್ನಡ ರೈಮ್ಸ್, ಹನುಮಾನ್ ಚಾಲೀಸ, ಶ್ಲೋಕಗಳು, ವಿಷ್ಣು ಸಹಸ್ರ ನಾಮಗಳನ್ನೂ ನಿರರ್ಗಳವಾಗಿ ನೋಡದೇ ಹೇಳುವ ಅನ್ವಿತಾ, ಉದಯೋನ್ಮುಖಿ ಪ್ರತಿಭೆಯಾಗಿ ಹೊರಹೊಮ್ಮಿದ್ದಾಳೆ.

ಇವರ ಇನ್ನೊಂದು ವಿಶೇಷ ಪ್ರತಿಭೆ ಎಂದರೆ, ಎರಡು ಕೈಯಿಂದಲೂ ಬರೆಯುತ್ತಾಳೆ. ಇದುವರೆಗೂ 10ಕ್ಕೂ ಹೆಚ್ಚು ವಿವಿಧ ಸ್ಪರ್ಧೆಗಳಲ್ಲಿ ಭಾಗ ವಹಿಸಿ, ಬಹುಮಾನ ಹಾಗೂ ಪ್ರಶಸ್ತಿ ಪಡೆದಿದ್ದಾಳೆ. ಇವರ ಈ ಕಲಿಕಾ ಸಾಧನೆಯ ಹಿಂದೆ ತಾಯಿ ಸುಮಾ, ತಂದೆ ನಟರಾಜ್ ಮತ್ತು ಅಂಗನವಾಡಿ ಶಿಕ್ಷಕಿ ಅಂಬಿಕಾ ಅವರ ಪರಿಶ್ರಮ ಸಾಕಷ್ಟಿದೆ.

# ಜಿಲ್ಲಾ ಮಟ್ಟಕ್ಕೆ ಮುಕ್ತೇನಹಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳ ಆಯ್ಕೆ



ಹೊನ್ನಾಳಿ, ಸೆ.10 - ತಾಲ್ಲೂಕು ಮಟ್ಟದ ಪ್ರೌಢಶಾಲಾ ವಿಭಾಗದ ಕ್ರೀಡಾಕೂಟದಲ್ಲಿ ಬಾಲ್ ಬ್ಯಾಡ್ಮಿಂಟನ್ ವಿಭಾಗಗಳಲ್ಲಿ ಬಾಲಕರ ಮತ್ತು ಬಾಲಕಿಯರ ಎರಡೂ ವಿಭಾಗಗಳಲ್ಲಿ ಮುಕ್ತೇನಹಳ್ಳಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

# ರೆಡ್ ಕ್ರಾಸ್‌ನಿಂದ ರಕ್ತದಾನ ಶಿಬಿರ



ದಾವಣಗೆರೆ, ಸೆ. 10- ಭಾರತೀಯ ರೆಡ್ ಕ್ರಾಸ್ ಸಂಸ್ಥೆ ದಾವಣಗೆರೆ ಸಹಯೋಗದಲ್ಲಿ ನಗರದ ಜೆ.ಹೆಚ್. ಪಟೇಲ್ ಕಾಲೇಜು ವತಿಯಿಂದ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಪ್ರಾಂಶುಪಾಲರಾದ ಜಿ.ಟಿ. ಅಶ್ವಿನಿ ಹಾಗೂ ಸಿಬ್ಬಂದಿಗಳು, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕ ಡಿ.ಎನ್. ಶಿವಾನಂದ್, ಸಂಯೋಜಕ ಎನ್. ಜಿ. ಶಿವಕುಮಾರ್, ಸಿಬ್ಬಂದಿಗಳಾದ ಜ್ಯೋತಿ, ಗಿರೀಶ್ ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ ಇಂದಿನಿಂದ ಮಿಷನ್ ಇಂದ್ರಧನುಷ್ ಲಸಿಕಾಕರಣ

ದಾವಣಗೆರೆ, ಸೆ. 10 - ಮಿಷನ್ ಇಂದ್ರಧನುಷ್ ಲಸಿಕಾಕರಣವು ನಾಳೆ ದಿನಾಂಕ 11 ರಿಂದ 16ರವರೆಗೆ ನಡೆಯಲಿದ್ದು, ಅಂಗನವಾಡಿಗಳಿಲ್ಲದ ಜನ ವಸತಿ ಪ್ರದೇಶಗಳಲ್ಲಿ ಆಶಾ ಕಾರ್ಯಕರ್ತೆಯರನ್ನು ನೇಮಿಸಿ, ಇಂದ್ರಧನುಷ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ ವೆಂಕಟೇಶ್ ತಿಳಿಸಿದ್ದಾರೆ.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೊನ್ನೆ ನಡೆಸಿದ ತೀವ್ರ ತರವಾದ ಮಿಷನ್ ಇಂದ್ರಧನುಷ್ 5.0 ಡಿಟಿಎಫ್ಐ ಸಭೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತಾನಾಡಿದರು.

ದಾವಣಗೆರೆ ಜಿಲ್ಲೆಯಲ್ಲಿ 2017ರಲ್ಲಿ ಇಂದ್ರಧನುಷ್ ಅಭಿಯಾನವು ಪ್ರಾರಂಭವಾಗಿರುತ್ತದೆ. 5 ವರ್ಷದೊಳಗಿನ ಲಸಿಕೆ ವಂಚಿತ ಮಕ್ಕಳನ್ನು ಗುರುತಿಸಿ ಇಂದ್ರಧನುಷ್ ಲಸಿಕೆ ನೀಡಲಾಗುತ್ತಿದೆ. ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಪಡೆದ ಮಕ್ಕಳ ಮಾಹಿತಿ ಸಂಗ್ರಹಿಸಬೇಕು ಎಂದು ತಿಳಿಸಿದರು. ಈಗಾಗಲೇ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮವು ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕೆಂದರು.

ಲಸಿಕೆ ನೀಡುವಾಗ ಯಾವುದೇ ಲೋಪದೋಷ ಬಾರದಂತೆ ಮತ್ತು ತಾಯಂದಿರಿಗೆ ಲಸಿಕೆ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ ಮಕ್ಕಳಿಗೆ ಲಸಿಕೆ ಕೊಡಬೇಕು. ಆರೋಗ್ಯ ಇಲಾಖೆಯು ಕ್ರಿಯಾತ್ಮಕ ಜಾಹೀರಾತು ನೀಡುವ ಮೂಲಕ ಜನರಲ್ಲಿ ಲಸಿಕೆಯ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ಈ ಅಭಿಯಾನದಲ್ಲಿ ಲಸಿಕೆ ಪಡೆಯದೇ ವಂಚಿತರಾಗಿರುವ, ಬಿಟ್ಟು ಹೋಗಿರುವ, ಪ್ರದೇಶಗಳು ಮತ್ತು ಸಮುದಾಯ ಗಳನ್ನು ಗುರುತಿಸಿ ಅವರಿಗೆ ಇಂದ್ರಧನುಷ್ ಲಸಿಕೆ ಹಾಕಿಸಲು ಗುರಿಯನ್ನು ಹೊಂದಬೇಕು ಎಂದರು.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯವು ಮೊದಲನೆ ಹಂತ ಆಗಸ್ಟ್ 7 ರಿಂದ 12 ರವರೆಗೆ, ಎರಡನೇ ಹಂತ ಸೆಪ್ಟೆಂಬರ್ 12 ರಿಂದ 16ರವರೆಗೆ ಮತ್ತು ಮೂರನೇ ಹಂತ ಅಕ್ಟೋಬರ್ 9 ರಿಂದ 14 ರವರೆಗೆ ಈ ತಿಂಗಳುಗಳಲ್ಲಿ ನಿರ್ದಿಷ್ಟ 6 ದಿನಗಳಂದು ಸಾರ್ವತ್ರಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ತೀವ್ರತರವಾದ ಮಿಷನ್ ಇಂದ್ರಧನುಷ್ 5.0 ರಲ್ಲಿ ನೀಡಲಾದ ಲಸಿಕೆಗಳ ವಿವರವನ್ನು U-WIN ಪೋರ್ಟಲ್ ನಲ್ಲಿ ದಾಖಲಿಸಿ ಇ-ಲಸಿಕಾಕರಣದ ಪ್ರಮಾಣ ಪತ್ರ ಸೃಜಿಸಲಾಗುವುದು. ಲಸಿಕೆ ಬಾಕಿ ಇರುವ, ಲಸಿಕೆ ಬಿಟ್ಟು ಹೋಗಿರುವ, ಲಸಿಕೆ ವಂಚಿತರಾಗಿರುವ ಮಕ್ಕಳಿಗೆ ಹಾಗೂ ಗರ್ಭಿಣಿಯರಿಗೆ ಲಸಿಕೆ ಹಾಕಿಸುವಲ್ಲಿ ಎಲ್ಲರ ಸಹಕಾರ ಮಹತ್ವದಾಗಿರುತ್ತದೆ. ಈ ನಿಟ್ಟಿನಲ್ಲಿ ಎಲ್ಲಾ ಇಲಾಖೆಗಳು ಸಂವಹನ ತಂತ್ರಜ್ಞಾನ ಅಭಿವೃದ್ಧಿಗೆ ಬೆಂಬಲ ನೀಡಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಯೋಜನಾಧಿಕಾರಿ ಮಲ್ಲನಾಯ್ಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ವಾಸಂತಿ ಉಪ್ಪಾರ, ಹಾಗೂ ಆರೋಗ್ಯಾಧಿಕಾರಿ ಉಪಸ್ಥಿತರಿದ್ದರು.

# ಖಾಸಗಿ ಸಾರಿಗೆ ಮುಷ್ಕರ

**(1ನೇ ಪುಟದಿಂದ)** ಬಸ್‌ಗಳನ್ನು ನಿಯೋಜಿಸಿ, ಜನದಟ್ಟಣೆ ಸಮಸ್ಯೆ ಕಡಿಮೆ ಮಾಡಲು ಬಿಎಂಟಿಸಿ ನಿರ್ಧರಿಸಿದೆ.

ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ್ ಶರ್ಮ, ನಮ್ಮ ಬೇಡಿಕೆಗಳಿಗೆ ಸಾರಿಗೆ ಸಚಿವರು, ಇಲಾಖೆಯ ಅಧಿಕಾರಿ ಗಳು ಸ್ಪಂದಿಸಿಲ್ಲ. ಹಾಗಾಗಿ ಬಂದ್‌ಗೆ ಅನಿವಾರ್ಯವಾಗಿ ಕರೆ ನೀಡಲಾಗಿದೆ. ಒಂದು ದಿನದ ಮಟ್ಟಿಗೆ ಸಾರ್ವಜನಿಕರು ಸಹಕರಿಸ ಬೇಕು ಎಂದು ತಿಳಿಸಿದ್ದಾರೆ.

ಟ್ಯಾಕ್ಸಿ, ಆಟೋ, ಮ್ಯಾಕ್ಸಿಕ್ಯಾಬ್, ಖಾಸಗಿ ಬಸ್ ಮಾಲೀಕರ ಸಂಘಟನೆ ಸೇರಿದಂತೆ ಒಟ್ಟು 32 ಸಂಘಟನೆಗಳು ಸೇರಿ ಸೆ.10ರ ರಾತ್ರಿ 12ರಿಂದ ಸೆ.11ರ ರಾತ್ರಿ 12ರವರೆಗೆ ಮುಷ್ಕರಕ್ಕೆ ಕರೆ ನೀಡಿವೆ. ನಮಗೆ ಬೆಂಬಲ ನೀಡದೇ ಸಂಚರಿಸುವ ವಾಹನಗಳಿಗೆ ನಾವೇನು ಮಾಡುವುದಿಲ್ಲ. ಏನಾದರೂ ಹಾನಿ ಯಾದರೆ ನಾವು ಜವಾಬ್ದಾರರಲ್ಲ ಎಂದು ಹೇಳಿದ್ದಾರೆ.

# ಹರಿಹರದಲ್ಲಿ ಇಂದು ಗಂಗಾ ಪೂಜೆ

ದಾವಣಗೆರೆ ಕೆ.ಟಿ.ಜೆ. ನಗರದ 10ನೇ ತಿರುವಿನಲ್ಲಿರುವ ಗಾಂಧೀಜಿ ಹರಿಜನ ಯುವಕ ಸಂಘದ ಆಶ್ರಯದಲ್ಲಿ ಇಂದು ಬೆಳಿಗ್ಗೆ 9 ಗಂಟೆಗೆ ಶ್ರೀ ಕಂಠಿ ದುರ್ಗಮ್ಮ ದೇವಿಗೆ ಹರಿಹರದ ತುಂಗಭದ್ರಾ ನದಿಯಲ್ಲಿ ಗಂಗಾ ಪೂಜೆ ನೆರವೇರಿಸಲಾಗುವುದು ಎಂದು ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಕೆಪಿಸಿಸಿ ಎಸ್ಸಿ ವಿಭಾಗದ ಕಾರ್ಯದರ್ಶಿ ಸೋಮಲಾಪುರದ ಹನುಮಂತಪ್ಪ ತಿಳಿಸಿದ್ದಾರೆ.

# ಕ್ಲಸ್ಟರ್ ಕ್ರೀಡಾಕೂಟದಲ್ಲಿ ಕಂದಗಲ್ಲು ಸರ್ಕಾರಿ ಶಾಲೆಗೆ ಸಮಗ್ರ ಪ್ರಶಸ್ತಿ



ದಾವಣಗೆರೆ, ಸೆ. 10- ಕ್ಲಸ್ಟರ್ ಮಟ್ಟದ ಕ್ರೀಡಾಕೂಟದಲ್ಲಿ ಕಂದಗಲ್ಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಾಲಕಿಯರು ಸಮಗ್ರ ಪ್ರಶಸ್ತಿ ಪಡೆದಿದ್ದಾರೆ.

ಬಾಲಕಿಯರ ವಾಲಿಬಾಲ್ ಸ್ಪರ್ಧೆಯಲ್ಲಿ ಕಲ್ಪನಾ ಮತ್ತು ತಂಡ ಪ್ರಥಮ, ಬಾಲಕಿಯರ ಥ್ರೋಬಾಲ್‌ನಲ್ಲಿ ಕೋಮಲ ಮತ್ತು ತಂಡ ಪ್ರಥಮ, ಬಾಲಕಿಯರ ವಿಭಾಗದ 100 ಮೀ., 200 ಮೀ. ಮತ್ತು 400 ಮೀ. ವಿಭಾಗದಲ್ಲಿ ಕೋಮಲ ಪ್ರಥಮ, 4x100 ರಿಲೇ ಓಟದಲ್ಲಿ ನಿಖಿತಾ ಮತ್ತು ತಂಡ ತೃತೀಯ, ಗುಂಡು ಎಸೆತದಲ್ಲಿ ಕಲ್ಪನಾ ತೃತೀಯ, ತಟ್ಟೆ ಎಸೆತದಲ್ಲಿ ಕೋಮಲ ಪ್ರಥಮ ಹಾಗೂ ಬಾಲಕರ 200 ಮೀಟರ್ ಓಟದಲ್ಲಿ ಮಾರುತಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

# ಪ್ರೊ. ಎಸ್. ಬಿ. ರಂಗನಾಥ್‌ಗೆ ಸನ್ಮಾನ



ದಾವಣಗೆರೆ, ಸೆ.10- ದಾವಣಗೆರೆ ವಿಶ್ವವಿದ್ಯಾಲಯದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ನಿವೃತ್ತ ಪ್ರಾಂಶುಪಾಲ ಪ್ರೊ. ಎಸ್. ಬಿ. ರಂಗನಾಥ್ ಅವರನ್ನು ಕುಲಪತಿ ಡಾ.ಬಿ.ಡಿ.ಕುಂಬಾರ್ ಸನ್ಮಾನಿಸಿದರು.

# ನಗರದಲ್ಲಿ ಇಂದು ರಾಜಯೋಗ ಶಿಬಿರ

ಎಸ್.ಎಸ್. ಬಡಾವಣೆ ಬಿ ಬ್ಲಾಕ್‌ನಲ್ಲಿರುವ ರಾಘವೇಂದ್ರ ಕಾಲೇಜು ಹತ್ತಿರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಗೀತಾ ಪಾಠ ಶಾಲೆಯಲ್ಲಿ ಇಂದಿನಿಂದ ಇದೇ ದಿನಾಂಕ 16ರವರೆಗೆ ಪ್ರತಿದಿನ ಸಂಜೆ 6 ರಿಂದ 7ರವರೆಗೆ ಉಚಿತ ರಾಜಯೋಗ ಶಿಕ್ಷಣ ಶಿಬಿರ ನಡೆಯಲಿದೆ.

ರಾಜಯೋಗವು ದಿವ್ಯ ಔಷಧಿಯಾಗಿದ್ದು, ಅನೇಕ ಮನೋ ದೈಹಿಕ ಖಾಯಿಲೆಗಳನ್ನು ನಿಯಂತ್ರಣ ಮಾಡುವಲ್ಲಿ ಮತ್ತು ನಿರ್ಮೂಲನೆ ಮಾಡುವಲ್ಲಿ ಪರಿಣಾಮಕಾರಿಯಾಗಿದೆ ಎಂದು ಶಿಕ್ಷಕ ಬಿ.ಕೆ.ರಾಜು ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 98863-84088.

# ಹರಿಹರದಲ್ಲಿಂದು ಸತ್ಸಂಗ ಕಾರ್ಯಕ್ರಮ

ಶ್ರೀ ಗುರು ಬ್ರಹ್ಮಾನಂದ ಮಠದಲ್ಲಿ ಸತ್ಸಂಗ ಹಾಗೂ ಶ್ರೀ ಸಿದ್ಧಾರೂಢರ ಕಥಾಮೃತ ಶ್ರವಣದ ಮುಕ್ತಾಯ ಕಾರ್ಯಕ್ರಮ ಇಂದು ಸಂಜೆ 6 ಗಂಟೆಯಿಂದ ನಡೆಯಲಿದೆ. ಮುಪ್ಪಿನಾರ್ಯ ಭಜನಾ ಮಂಡಳಿ ಮತ್ತು ಶಿವಾನಂದಪ್ಪ ಮೌನೇಶ್ ಆಚಾರ್ ತಂಡದವರಿಂದ ಸಂಗೀತ ಕಾರ್ಯಕ್ರಮದ ನಂತರ ಸಂಜೆ 7 ರಿಂದ ಶ್ರೀ ಪ್ರಭುಲಿಂಗ ಸ್ವಾಮೀಜಿ, ಶ್ರೀ ಪ್ರಿಯಾನಂದ ಸ್ವಾಮೀಜಿ, ಶ್ರೀ ಮಲ್ಲಿಕಾರ್ಜುನ ದೇವಾಂಗದ್ ಗುರುಗಳು ಹಾಗೂ ಮಾತೋಶ್ರೀ ಗೀತಮ್ಮ ತಾಯಿಯವರಿಂದ ಪ್ರವಚನ ಕಾರ್ಯಕ್ರಮ ಜರುಗಲಿದೆ. 105ನೇ ಸತ್ಸಂಗದ ಪ್ರಸಾದ ಸೇವೆಯನ್ನು ಶ್ರೀಮತಿ ಶಾಂತ ಮಂಜುನಾಥ್ ನಡೆಸಿಕೊಡಲಿದ್ದಾರೆ.

# ಚನ್ನಗಿರಿಗೆ ಲೋಕಾಯುಕ್ತ ಅಧಿಕಾರಿಗಳು

ಚನ್ನಗಿರಿ, ಸೆ.10- ದಾವಣಗೆರೆ ಜಿಲ್ಲಾ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಇದೇ ದಿನಾಂಕ 13ರಂದು ಚನ್ನಗಿರಿ ತಾಲ್ಲೂಕು ಪ್ರವಾಸ ಕೈಗೊಳ್ಳಲಿದ್ದು ಸಾರ್ವಜನಿಕರು ತಮ್ಮ ದೂರುಗಳನ್ನು ಸಲ್ಲಿಸಬಹುದಾಗಿದೆ.

ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್ ಕೌಲಾಪೂರೆ ಅವರು ಅಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 1.30ರವರೆಗೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು. ಸಾರ್ವಜನಿಕರು ಸರ್ಕಾರದ ವಿವಿಧ ಇಲಾಖೆಗಳಿಗೆ ಸಲ್ಲಿಸಿದ ಅರ್ಜಿಗಳನ್ನು ಇತ್ಯರ್ಥ ಮಾಡದ ಬಗ್ಗೆ ತಮ್ಮ ದೂರು ಹಾಗೂ ಅಹವಾಲುಗಳನ್ನು ಸಲ್ಲಿಸಬಹುದು. ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇದ್ದರೆ, ಅಂತಹ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ತಿಳಿಸಲಾಗಿದೆ.


## ತೃತೀಯ ವರ್ಷದ ಪುಣ್ಯಸ್ಮರಣೆ



**ಮುತ್ತೈದೆ ಭಾಗ್ಯವತಿ ಶ್ರೀಮತಿ ದೊಗ್ಗಳ್ಳಿ ನೀಲಮ್ಮನವರು**

ನಿಧನ : 11.09.2020

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು... ನೀವು ಕುಟುಂಬಕ್ಕೆ ತೋರಿದ ಪ್ರೀತಿ, ಕಾಳಜಿ, ಸೇವೆ, ತ್ಯಾಗ, ಆರೈಕೆ ಹಾಗೂ ಆದರ್ಶಗಳು ಸದಾ ನಮಗೆ ದಾರಿದೀಪವಾಗಿವೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ. ಸದಾ ನಿಮ್ಮ ನೆನಪಿನಲ್ಲಿರುವ

ಪತಿ : ಶ್ರೀ ಬಿ. ಜಯಪ್ಪ (ಐಗೂರು)

ನಿವೃತ್ತ ಭೂ ದಾಖಲೆ ಸಹಾಯಕ ನಿರ್ದೇಶಕರು

ಮಕ್ಕಳು : ಶ್ರೀ ಬಿ. ಬಸವರಾಜ್,

ನಿವೃತ್ತ ಸ. ವ್ಯವಸ್ಥಾಪಕರು, ಕರ್ನಾಟಕ ಗ್ರಾಮೀಣ ಬ್ಯಾಂಕ್, ಕೋಲಾರ.

ಶ್ರೀ ಬಿ. ಸುರೇಶ್, ನಿವೃತ್ತ ಉಪನ್ಯಾಸಕರು, ಬಾಪೂಜಿ ಪಾಲಿಟೆಕ್ನಿಕ್

ಸೊಸೆಯಂದಿರು ಮತ್ತು ಮೊಮ್ಮಕ್ಕಳು. ಬೂದಿಹಾಳ್ ವಂಶಸ್ಥರು ಮತ್ತು ಐಗೂರು ಗ್ರಾಮಸ್ಥರು, ದೊಗ್ಗಳ್ಳಿ ವಂಶಸ್ಥರು ಹಾಗೂ ಬಂಧು-ಮಿತ್ರರು


# ವಿಶ್ವಸಂಸ್ಥೆ ವಿಸ್ತರಣೆಗೆ ಪ್ರಧಾನಿ ಆಗ್ರಹ

**(1ನೇ ಪುಟದಿಂದ)** ಆಧರಿಸಿ ಜಾಗತಿಕ ಸಂಸ್ಥೆಗಳು ಮುನ್ನಡೆಯಬೇಕಿದೆ. ವಿಶ್ವಸಂಸ್ಥೆ ಸ್ಥಾಪನೆಯಾದಾಗ ಪರಿಸ್ಥಿತಿ ಈಗಿನದಕ್ಕಿಂತ ಸಾಕಷ್ಟು ಭಿನ್ನವಾಗಿತ್ತು. ಆ ಸಂದರ್ಭದಲ್ಲಿ 51 ಸ್ಥಾಪಕ ಸದಸ್ಯ ದೇಶಗಳಿದ್ದವು. ಈಗ ಅವುಗಳ ಸಂಖ್ಯೆ 200 ದಾಟಿದೆ ಎಂದು ಮೋದಿ ತಿಳಿಸಿದರು.



ಇಷ್ಟಾದರೂ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಶಾಶ್ವತ ಸದಸ್ಯರ ಸಂಖ್ಯೆ ಯಥಾಸ್ಥಿತಿಯಲ್ಲಿದೆ. ಪ್ರತಿಯೊಂದು ಅಂಶದಲ್ಲೂ ವಿಶ್ವ ಬದಲಾಗಿದೆ.

ಸಾರಿಗೆ, ಸಂವಹನ, ಆರೋಗ್ಯ ಹಾಗೂ ಶಿಕ್ಷಣ ಸೇರಿದಂತೆ ಪ್ರತಿಯೊಂದು ವಲಯವೂ ರೂಪಾಂತರಗೊಂಡಿದೆ. ಈ ಹೊಸ ವಾಸ್ತವಿಕತೆಗಳು ನೂತನ ಜಾಗತಿಕ ಸ್ವರೂಪದಲ್ಲಿ ಬಿಂಬಿತವಾಗಬೇಕು ಎಂದು ಮೋದಿ ಹೇಳಿದ್ದಾರೆ.

ಭದ್ರತಾ ಮಂಡಳಿಯಲ್ಲಿ ಅಮೆರಿಕ, ಚೀನಾ, ಫ್ರಾನ್ಸ್, ಬ್ರಿಟನ್ ಹಾಗೂ ರಷ್ಯಾಗಳು ಶಾಶ್ವತ ಸದಸ್ಯ ದೇಶಗಳಾಗಿವೆ.

ಅದೇ ರೀತಿ ನಾವು ಬಹುಪಕ್ಷೀಯ ಬ್ಯಾಂಕುಗಳನ್ನು ವಿಸ್ತರಿಸಬೇಕಿದೆ. ಈ ದಿಸೆಯಲ್ಲಿ ತಕ್ಷಣ ಹಾಗೂ ಪರಿಣಾಮಕಾರಿ ಕ್ರಮಗಳ ಅಗತ್ಯವಿದೆ ಎಂದು ಪ್ರಧಾನಿ ಹೇಳಿದರು.

ಸೈಬರ್ ಭದ್ರತೆ ಹಾಗೂ ಕ್ರಿಪ್ಟೋ ಕರೆನ್ಸಿಗಳು ಈಗ ಜ್ವಲಂತ ಹಾಗೂ ಭವಿಷ್ಯದ ವಿಷಯಗಳಾಗಿವೆ. ಕ್ರಿಪ್ಟೋ ಕರೆನ್ಸಿಗಳನ್ನು ನಿಯಂತ್ರಿಸಬೇಕಿದೆ ಎಂದು ಪ್ರಧಾನಿ ಹೇಳಿದರು.

# ಜಿ20 ಶೃಂಗಸಭೆಯಲ್ಲಿ ಮಮತಾ ಭಾಗಿಯಾಗಿದ್ದಕ್ಕೆ ಆಕ್ಷೇಪ

ಕೊಲ್ಕೊತಾ, ಸೆ. 10 – ಜಿ20 ಶೃಂಗಸಭೆಯ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಯೋಜಿಸಿದ್ದ ಔತಣ ಕೂಟದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಭಾಗವಹಿಸಿದ್ದನ್ನು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಟೀಕಿಸಿದ್ದಾರೆ.

ರಾಷ್ಟ್ರಪತಿ ಕರೆದಿದ್ದ ಔತಣ ಕೂಟದಲ್ಲಿ ಭಾಗವಹಿಸುವುದರಿಂದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವಿರುದ್ಧದ ನಿಲುವು ದುರ್ಬಲವಾಗುತ್ತದೆ ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ತೃಣಮೂಲ ಕಾಂಗ್ರೆಸ್, ಮಮತಾ ಬ್ಯಾನರ್ಜಿ ಅವರು ಬಿಜೆಪಿಯೇತರ ಐ.ಎನ್.ಡಿ.ಐ.ಎ. ಒಕ್ಕೂಟದ ಹಿಂದಿರುವ ಪ್ರಮುಖರಲ್ಲಿ ಒಬ್ಬರಾಗಿದ್ದಾರೆ. ಆಡಳಿತಾತ್ಮಕ ದೃಷ್ಟಿಯಿಂದ ಅಗತ್ಯವಾದ ಶಿಷ್ಟಾಚಾರದ ಬಗ್ಗೆ ಕಾಂಗ್ರೆಸ್ ಅವರಿಗೆ ಪಾಠ ಮಾಡಬೇಕಿಲ್ಲ ಎಂದು ಹೇಳಿದೆ.

# ಹರಿಹರದಲ್ಲಿ ಕೃಷ್ಣ ಜನ್ಮಾಷ್ಟಮಿ ಆಚರಣೆ



ಹರಿಹರ, ಸೆ. 10 - ನಗರದ ಹ್ಯಾಪಿ ಕಿಡ್ಸ್ ಮತ್ತು ಎಸ್.ಜೆ.ಸಿ.ಪಿ.ಎಸ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು, ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಆರ್.ಟಿ. ಪ್ರಶಾಂತ್ ದುಗ್ಗತ್ತಿಮಠ್, ಶ್ರೀಮತಿ ಶಿವಗಂಗಮ್ಮ, ಚೇತನ್, ವೀರೇಶ, ಶ್ರೀಮತಿ ವೇದಾವತಿ, ಸುಕನ್ಯಾ, ಶ್ರೀಮತಿ ಬಾನು, ಆದಿತ್ಯ ಮತ್ತಿತರರು ಉಪಸ್ಥಿತರಿದ್ದರು. ಶಾಲೆಯ ವಿದ್ಯಾರ್ಥಿಗಳು ಶ್ರೀಕೃಷ್ಣ ಹಾಗು ರಾಧೆಯ ವೇಷಭೂಷ ಧರಿಸಿ ಸುಂದರವಾಗಿ ಕಂಗೊಳಿಸಿದರು.

# ಗೌಡರ ಉಚ್ಛಾಟನೆಗೆ ರೇಣುಕಾಚಾರ್ಯ ಖಂಡನೆ

**(1ನೇ ಪುಟದಿಂದ)** ಮಾಡಿದ್ದರೆ ನೋಟಿಸ್ ನೀಡಬೇಕು. ಆದರೆ ಯಾವುದೇ ನೋಟಿಸ್ ನೀಡದೆ ಪಕ್ಷದಿಂದ ಉಚ್ಛಾಟನೆ ಮಾಡಿರುವುದು ಸರಿಯಲ್ಲ ಎಂದರು.

## ಟಿಕೆಟ್ ಬಗ್ಗೆ ಕಾದು ನೋಡುತ್ತೇನೆ

ನನಗೆ ಕಾಂಗ್ರೆಸ್‌ಗೆ ಬನ್ನಿ ಎಂದು ಯಾರೂ ಕರೆದಿಲ್ಲ. ನಾನು ಹೋಗ್ತೀನಿ ಎಂದು ಎಲ್ಲೂ ಹೇಳಿಲ್ಲ. ನಾನು ಕೂಡ ಎಂಪಿ ಚುನಾವಣೆ ಆಕಾಂಕ್ಷಿ. ಟಿಕೆಟ್ ಬಗ್ಗೆ ಕಾದು ನೋಡುತ್ತೇನೆ. ಟಿಕೆಟ್ ಸಿಗದೇ ಇದ್ದರೆ ಕಾರ್ಯಕರ್ತರು, ಮುಖಂಡರ ಅಭಿಪ್ರಾಯ ಪಡೆದು ಮುಂದಿನ ತೀರ್ಮಾನ ತೆಗೆದುಕೊಳ್ಳುತ್ತೇನೆ. ನನ್ನ ಹೋರಾಟ ಯಾರ ವಿರುದ್ಧ ಕತ್ತಿ ಮಸೆಯಲು ಅಲ್ಲ. ಸಂಘಟನೆ ಉಳಿಸಲು ಕೆಲಸ ಮಾಡುತ್ತೇನೆ ಎಂದು ಮಾಜಿ ಸಚಿವ ರೇಣುಕಾಚಾರ್ಯ ಹೇಳಿದರು.

ಗುರುಸಿದ್ದನಗೌಡ ಅವರ ಪುತ್ರ ಡಾ. ರವಿಕುಮಾರ್ ಸಹ ಲೋಕಸಭಾ ಚುನಾವಣೆಗೆ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಅವರು ರಾಜಕೀಯ ಕ್ಷೇತ್ರದಲ್ಲಿ ಬೆಳೆಯಬಾರದೆಂದು ಉಚ್ಛಾಟನೆ ಮಾಡಿರುವುದು ಸರಿಯಲ್ಲ. ಮಾಜಿ ಶಾಸಕರಾದ ರವೀಂದ್ರನಾಥ್, ಗುರುಸಿದ್ದನಗೌಡ್ರು ಅಂತವರನ್ನು ಮೂಲೆಗುಂಪು ಮಾಡಲಾಗುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಜಿಲ್ಲೆಯ ಐದು ಶಾಸಕರು ಒಟ್ಟಾಗಿ ಸಚಿವ ಸ್ಥಾನ ಕೇಳಿದರೂ ಕೊಡಲು ಬಿಡದೆ, ಸಚಿವ ಸ್ಥಾನ ತಪ್ಪಿಸಲಾಯಿತು. ಜಿಲ್ಲಾ ಅಧ್ಯಕ್ಷರು ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡಿದ್ದಾರೆ ಎಂದು ಕಿಡಿಕಾರಿದರು.

ದೇಶಕ್ಕೆ ಮೋದಿ ಹೇಗೋ ಹಾಗೆ ರಾಜ್ಯಕ್ಕೆ ಯಡಿಯೂರಪ್ಪ. ಅವರು ಎಲ್ಲಾ ಸಮುದಾಯ ಗಳನ್ನು ಒಟ್ಟಿಗೆ ತೆಗೆದುಕೊಂಡು ಹೋದ ಮಹಾನ್ ನಾಯಕ. ವ್ಯವಸ್ಥಿತವಾಗಿ ಯಡಿಯೂರಪ್ಪ ನವರನ್ನು ಇಳಿಸುವ ಕೆಲಸ ಮಾಡಿದ್ದರು. ನಮ್ಮವರೇ ಆರೋಪ ಹೊರಿಸಿ ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿಸಿದರು ಎಂದು ರಾಜ್ಯ ಮುಖಂಡರ ವರ್ತನೆಗೆ ರೇಣುಕಾಚಾರ್ಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಯಡಿಯೂರಪ್ಪನವರು ನೋಡದ ಹಳ್ಳಿಗಳಿಲ್ಲ. ಗ್ರಾಮ ಪಂಚಾಯ್ತಿ ಗೆಲ್ಲಲೂ ಆಗದವರು ಪಕ್ಷದ ಜವಾಬ್ದಾರಿ ವಹಿಸಿಕೊಂಡರು. ಆದರೆ ಈಗ ಪಕ್ಷಕ್ಕೆ ಸಾಕಷ್ಟು ಡ್ಯಾಮೇಜ್ ಆದ ಮೇಲೆ, ಲೋಕಸಭಾ ಚುನಾವಣೆಗೆ ಮತಗಳು ಬೇಕೆಂದು ಯಡಿಯೂರಪ್ಪನವರ ನಾಯಕತ್ವ ಕೇಳುತ್ತಿದ್ದಾರೆ ಎಂದು ಟೀಕಿಸಿದರು.

ನಾಳೆ ಮಾಡಾಳು ವಿರೂಪಾಕ್ಷಪ್ಪ ಅವರನ್ನು ಭೇಟಿ ಮಾಡುವುದಾಗಿ ಹೇಳಿದ ರೇಣುಕಾಚಾರ್ಯ, ನನ್ನ ಮೇಲೆ ತೂಗುಕತ್ತಿ ತೂಗುತ್ತಾ ಇದೆ. ಈಗ ಮತ್ತೆ ನೋಟಿಸ್ ಕೊಟ್ಟಿದ್ದಾರೆ. ನಾನು ಉತ್ತರಿಸುವುದಿಲ್ಲ. ಯಾರಿಗೂ ಹೆದರುವುದಿಲ್ಲ. ಯಡಿಯೂರಪ್ಪ ಅವರ ವಿರುದ್ಧ ಮಾತನಾಡಿದವರ ಮೇಲೆ ಮೊದಲು ಕ್ರಮ ಕೈಗೊಳ್ಳಲಿ ಎಂದು ಹೇಳಿದರು.

ಈ ವೇಳೆ ಮಾಜಿ ಶಾಸಕ ಗುರುಸಿದ್ದನ ಗೌಡ್ರು, ಡಾ.ರವಿಕುಮಾರ್ ಇನ್ನಿತರರಿದ್ದರು.

# ರಾಷ್ಟ್ರಮಟ್ಟದ ಬೆಂಚ್ ಪ್ರೆಸ್ ಸ್ಪರ್ಧೆಯಲ್ಲಿ ಹರಿಹರಕ್ಕೆ ಪ್ರಶಸ್ತಿ



ದಾವಣಗೆರೆ, ಸೆ. 10 - ಛತ್ತೀಸ್‌ಘಡ ರಾಜ್ಯದ ಬಿಲಯ್ ನಗರದಲ್ಲಿ ಕಳೆದ ವಾರ ನಡೆದ 29ನೇ ರಾಷ್ಟ್ರೀಯ ಬೆಂಚ್ ಪ್ರೆಸ್ ಹಾಗು ಡೆಡ್ ಲಿಫ್ಟಿಂಗ್ ಸ್ಪರ್ಧೆಗಳು ಪುರುಷರ, ಮಹಿಳೆಯರ ಹಾಗು ಮಾಸ್ಟರ್ಸ್ ವಿಭಾಗದಲ್ಲಿ ನಡೆದಿದ್ದವು.

ಈ ಸ್ಪರ್ಧೆಗಳಲ್ಲಿ ಹರಿಹರ ಬ್ರದರ್ಸ್ ಜಿಮ್‌ನಿಂದ 4 ಜನ ಕ್ರೀಡಾಪಟುಗಳು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ, 59 ಕೆಜಿ ವಿಭಾಗದಲ್ಲಿ ಖಾಜ ಮೋಹಿನೋದ್ದಿನ್ ಅವರು ಭಾಗವಹಿಸಿ ಬೆಸ್ಟ್ ಬೆಂಚ್ ಪ್ರೆಸರ್ ಆಫ್ ಇಂಡಿಯಾ-2023ರ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಮುಂದೆ ನಡೆಯಲಿರುವ ಅಂತರರಾಷ್ಟ್ರೀಯ ಬೆಂಚ್ ಸ್ಪರ್ದೆಗಳಿಗೆ ಆಯ್ಕೆಯಾಗಿರುತ್ತಾರೆ. ಇದೇ ಸ್ಪರ್ಧೆಗಳಲ್ಲಿ 73 ಕೆಜಿ ತೂಕದ ವಿಭಾಗದಲ್ಲಿ ಶಹಬಾಜ್ ಅವರು ಕಂಚಿನ ಪದಕವನ್ನು ಗೆದ್ದಿದ್ದಾರೆ. ವಿಜೇತ ಕ್ರೀಡಾಪಟುಗಳಿಗೆ ಬ್ರದರ್ಸ್ ಜಿಮ್ ಸಂಚಾಲಕ, ಅಂತರರಾಷ್ಟ್ರೀಯ ದೇಹದಾರ್ಢ್ಯ ಪಟು ಅಕ್ರಂ ಬಾಷ, ತರಬೇತುದಾರ ಮಹಮ್ಮದ್ ರಫೀಕ್ ಸೇರಿದಂತೆ ಎಲ್ಲಾ ಕ್ರೀಡಾಪಟುಗಳು ಶುಭ ಹಾರೈಸಿದ್ದಾರೆ.

# ಚಳ್ಳಕೆರೆ ಗ್ರಂಥಾಲಯಕ್ಕೆ ದಿಢೀರ್ ಭೇಟಿ



ಚಳ್ಳಕೆರೆ, ಸೆ. 10- ಇಲ್ಲಿನ ಗ್ರಂಥಾಲಯಕ್ಕೆ ಚಿತ್ರದುರ್ಗ ಜಿಲ್ಲಾ ಗ್ರಂಥಾಲಯ ಅಧಿಕಾರಿ ತಿಪ್ಪೇಸ್ವಾಮಿ ಭೇಟಿ ನೀಡಿ, ಲೈಬ್ರರಿ ಸ್ವಚ್ಛತೆ, ಪುಸ್ತಕಗಳ ಕೊರತೆ ವೀಕ್ಷಿಸಿ ತಕ್ಷಣ ಸಮಸ್ಯೆ ಬಗೆಹರಿಸಲು ಸಂಬಂಧಪಟ್ಟವರಿಗೆ ತಿಳಿಸಿದರು.

ತಾಲ್ಲೂಕು ಗ್ರಂಥಾಲಯ ಅಧಿಕಾರಿ ಡಿ. ತಿಮ್ಮರಾಯಪ್ಪ ಅವರ ಮೇಲಿನ ಆರೋಪ ಸುಳ್ಳು ಎಂದು ತಿಳಿಸುತ್ತಾ, ಗ್ರಂಥಾಲಯದ ಓದುಗರ ಅನೇಕ ಸಮಸ್ಯೆಗಳನ್ನು ಸ್ಥಳದಲ್ಲಿ ಬಗೆಹರಿಸಿದರು. ಈ ಸಂದರ್ಭದಲ್ಲಿ ಕನ್ನಡ ರಕ್ಷಣಾ ಹೋರಾಟಗಾರ ಬಾಬು ನಗರಂಗೆರೆ, ಹನುಮಂತಪ್ಪ, ಪತ್ರಕರ್ತರಾದ ಟಿ. ತಿಪ್ಪೇಸ್ವಾಮಿ, ಸಿ.ವೈ. ಗಂಗಾಧರ್, ಬಿ. ರಂಗಸ್ವಾಮಿ, ರಾಜು ಉಪಸ್ಥಿತರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಜಾತ್ಯತೀತ ವ್ಯವಸ್ಥೆಗೆ ದಕ್ಕೆ ಆಗದಂತೆ ನೋಡಿಕೊಳ್ಳಿ



**ಪ್ರೊ. ಕೃಷ್ಣಪ್ಪ ಭವನದಲ್ಲಿನ ಸಂವಿಧಾನ ಓದು ಕಾರ್ಯಾಗಾರದಲ್ಲಿ ನ್ಯಾ.ನಾಗಮೋಹನ್‌ದಾಸ್**

ಮಲೇಬೆನ್ನೂರು, ಸೆ.10- 'ಜಾತ್ಯತೀತೆ ಎನ್ನುವುದು ನಮ್ಮ ದೇಶದ ಮೂಲ ತತ್ವ ಎಂದು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಹಾಗಾಗಿ ಅದು ಸಂವಿಧಾನದಲ್ಲಿ ಇನ್ನೂ ಉಳಿದಿದೆ. ಇಲ್ಲದಿದ್ದರೆ ಇಷ್ಟೊತ್ತಿಗೆ 'ಜಾತ್ಯತೀತ' ಎಂಬ ಪದವನ್ನೇ ಸಂವಿಧಾನದಿಂದ ತೆಗೆದು ಹಾಕುತ್ತಿದ್ದರೆಂದು ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಹೇಳಿದರು.

ಹನಗವಾಡಿ ಸಮೀಪ ಇರುವ ಪ್ರೊ. ಬಿ. ಕೃಷ್ಣಪ್ಪ ಭವನದಲ್ಲಿ ಮಾನವ ಬಂಧುತ್ವ ವೇದಿಕೆ ವತಿಯಿಂದ ಇಂದು ಹಮ್ಮಿಕೊಂಡಿದ್ದ ವಿಭಾಗೀಯ ಮಟ್ಟದ 'ಸಂವಿಧಾನ ಓದು ಕಾರ್ಯಾಗಾರ'ದಲ್ಲಿ 2ನೇ ದಿನ 'ಸಂವಿಧಾನ ಮತ್ತು ಜಾತ್ಯತೀತೆ' ವಿಷಯ ಕುರಿತು ಹಾಗೂ ಸಮಾರೋಪವಾಗಿ ಅವರು ಮಾತನಾಡಿದರು.

ಸುಪ್ರೀಂ ಕೋರ್ಟ್ ಜಾತ್ಯತೀತೆಯನ್ನು ಎತ್ತಿ ಹಿಡಿದಿದ್ದರೂ ಅದನ್ನು ಅಪವಿತ್ರತೆ ಮಾಡುವ ಕೆಲಸವನ್ನು ನಿರಂತರವಾಗಿ ನಡೆಯುತ್ತಿದೆ. ಸಂವಿಧಾನದಲ್ಲಿ ಕಟ್ಟಿಕೊಟ್ಟಿರುವ ಜಾತ್ಯತೀತ ವ್ಯವಸ್ಥೆಯನ್ನು ಉಳಿಸಿ ಬೆಳೆಸಲು ನಾವು ಜಾಗೃತರಾಗಬೇಕು. ಅದಕ್ಕಾಗಿ ಪ್ರತಿಯೊಬ್ಬರೂ ಸಂವಿಧಾನ ಓದಿ ಅರ್ಥ ಮಾಡಿಕೊಳ್ಳಬೇಕು. ಜೊತೆಗೆ ಇತರರಿಗೂ ಸಂವಿಧಾನದ ಮಹತ್ವ ತಿಳಿಸಬೇಕೆಂದರು.

ಸಂವಿಧಾನ ಓದಿ ಅರ್ಥ ಮಾಡಿಕೊಂಡವರು ಅದನ್ನು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಆಚರಣೆಗೆ ತರಬೇಕೆಂದ ನಾಗಮೋಹನ್‌ದಾಸ್ ಅವರು, ಜಾತ್ಯತೀತ ವ್ಯವಸ್ಥೆಗೆ ದಕ್ಕೆ ಆದಾಗ ಮತ್ತು ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಶಿಕ್ತಿಗಳನ್ನು ಹಿಮ್ಮೆಟ್ಟಿಸುವುದಕ್ಕಾಗಿ ದೇಶದ ಜನ ಪಕ್ಷಾತೀತವಾಗಿ ಜಾತ್ಯತೀತವಾಗಿ ಒಂದಾಗಬೇಕೆಂದು ಕರೆ ನೀಡಿದರು.

ಜಗತ್ತಿನ ಎಲ್ಲಾ ಧರ್ಮಗಳೂ ಕೂಡಾ ಜನರ ದುಃಖ, ದುಮ್ಮಾನಗಳನ್ನು ಪರಿಹರಿಸಲು ಹುಟ್ಟಿವೆ. ಹಾಗಾಗಿ ನಾವ್ಯಾರೂ ಧರ್ಮವಿರೋಧಿಗಳಾಗಬೇಕಿಲ್ಲ. ಆದರೆ ಮೂಲಭೂತವಾದ ಕೋಮುವಾದ ಆಗುವುದನ್ನು ತಡೆಗಟ್ಟಬೇಕಾದ ಧರ್ಮವನ್ನು ರಾಜಕಾರಣಕ್ಕೆ ಬಳಸುತ್ತಿದ್ದಾರೆ.

ಇದರಿಂದಾಗಿ ಮೂಲಭೂತವಾದ, ಕೋಮುವಾದ ಸೃಷ್ಟಿಯಾಗಿ ಸಾವಿರಾರು ಜನ ಪ್ರಾಣ ಕಳೆದುಕೊಂಡಿದ್ದಾರೆ. ಮೂಲಗಳ ಪ್ರಕಾರ ದೇಶದಲ್ಲಿ ಇದುವರೆಗೆ 14 ಸಾವಿರಕ್ಕೂ ಹೆಚ್ಚು ಕೋಮು ಗಲಭೆಗಳು ನಡೆದಿವೆ. ಅದರಲ್ಲಿ ಸತ್ತವರು, ಹಿಂದೂ-ಮುಸ್ಲಿಮರು ಎನ್ನುವುದಕ್ಕಿಂತ ಮುಖ್ಯವಾಗಿ ಮನುಷ್ಯರು ಎಂಬುದನ್ನು ನಾವು ಮೊದಲು ಅರ್ಥಮಾಡಿಕೊಳ್ಳಬೇಕು.

ಮೂಲಭೂತವಾದ ಮತ್ತು ಧರ್ಮವನ್ನು ಬೆರಸದೆ ಇರುವ ರಾಜಕೀಯ ವ್ಯವಸ್ಥೆಗೆ ಜಾತ್ಯತೀತ ಎನ್ನುತ್ತೇವೆ. ಜೊತೆಗೆ ನಮ್ಮ ದೇಶದಲ್ಲಿ ಎಲ್ಲಾ ವ್ಯವಸ್ಥೆಗಳಿಗಿಂತ 'ಪ್ರಜಾಪ್ರಭುತ್ವ ವ್ಯವಸ್ಥೆ' ಅತ್ಯಂತ ಶ್ರೇಷ್ಠವಾದದ್ದು. ಅಂತಹ ಪ್ರಜಾಪ್ರಭುತ್ವ ಮೂಲಭೂತವಾದಗಳನ್ನು ಬೆರಸಿ ದೇಶದಲ್ಲಿ ಅಶಾಂತಿ ಉಂಟು ಮಾಡುತ್ತಿದ್ದಾರೆ.

ಅಷ್ಟೇ ಅಲ್ಲ, ಇವತ್ತು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ವ್ಯವಸ್ಥೆ ಕೂಡಾ ಕೋಮುವಾದದಿಂದ ಕೂಡಿದೆ ಎಂದು ಬೇಸರ ವ್ಯಕ್ತಪಡಿಸಿದ ನಾಗಮೋಹನ್‌ದಾಸ್ ಅವರು, ಒಂದು ದೇಶವನ್ನು ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕವಾಗಿ ಕಟ್ಟಲು ಜಾತ್ಯತೀತೆ ಬಹಳ ಮುಖ್ಯವಾಗಿದೆ. ಏಕೆಂದರೆ ಜಾತ್ಯತೀತ ಮೌಲ್ಯದಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ಆದ್ದರಿಂದ ಎಲ್ಲರೂ ಬದುಕಿನಲ್ಲಿ ಭಾತೃತ್ವ ಮತ್ತು ಮೌಲ್ಯವನ್ನು ಅಳವಡಿಸಿಕೊಳ್ಳಬೇಕು.

ಭ್ರಷ್ಟಾಚಾರದ ವಿರುದ್ಧ ದೇಶದಲ್ಲಿ ದೊಡ್ಡ ಆಂದೋಲನವಾಗಬೇಕು. ಇದರಲ್ಲಿ ಯುವಜನರು ಹೆಚ್ಚು ಭಾಗಿಯಾಗಬೇಕು. ಇಲ್ಲದಿದ್ದರೆ ಭ್ರಷ್ಟಾಚಾರದಿಂದಾಗಿ ನೈತಿಕವಾಗಿ ದಿವಾಳಿ ಆಗುತ್ತವೆ ಎಂದು ನಾಗಮೋಹನ್‌ದಾಸ್ ಎಚ್ಚರಿಸಿದರು.

'ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಪರಿಕಲ್ಪನೆ' ಕುರಿತು ಕಿಗ್ಗಾ ರಾಜಶೇಖರ್ ಹಾಗೂ 'ಸಂವಿಧಾನ ಮತ್ತು ಮಹಿಳೆ' ಕುರಿತು ಡಾ. ಎ.ಬಿ. ರಾಮಚಂದ್ರಪ್ಪ ಮಾತನಾಡಿದರು.

ಪ್ರೊ ಕೃಷ್ಣಪ್ಪ ಟ್ರಸ್ಟ್‌ನ ರುದ್ರಪ್ಪ ಹನಗವಾಡಿ, ವಕೀಲರಾದ ಅನಂತ್‌ನಾಯ್ಕ್, ಎಲ್.ಹೆಚ್. ಅರುಣ್‌ಕುಮಾರ್, ಅನೀಶ್‌ಪಾಷಾ, ಹುಲಿಕಟ್ಟೆ ಚನ್ನಬಸಪ್ಪ, ಸಂತೋಷ್ ನೋಟದ್, ಪತ್ರಕರ್ತ ಜಿಗಳಿ ಪ್ರಕಾಶ್, ಮಾಡಾಳ್ ಶಿವಕುಮಾರ್, ರಾಘು ದೊಡ್ಮನಿ, ಉಕ್ಕಡಗಾತ್ರಿ ಮಂಜು ಸೇರಿದಂತೆ ಇತರರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

# ಕಾಂಗ್ರೆಸ್ ಪಾಪದ ಕೊಡ ತುಂಬಿದೆ

## ಜೆಡಿಎಸ್ ಸಮಾವೇಶದಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರ ಸ್ವಾಮಿ ಗುಡುಗು



ಬೆಂಗಳೂರು, ಸೆ.10- ರಾಜ್ಯ ಸರ್ಕಾರದ ಪಾಪದ ಕೊಡ ತುಂಬಿದೆ. ಈ ಸರ್ಕಾರದ ಭವಿಷ್ಯ ನನಗೆ ಗೊತ್ತಿದೆ. ಶಾಸಕರು ಅವರ ಕ್ಷೇತ್ರಕ್ಕೆ ಹೋಗಲು ಆಗ್ತಿಲ್ಲ. ಯಾವ ಸಮಯದಲ್ಲಿ ಏನ್ ಸ್ಫೋಟ ಆಗುತ್ತೋ ಗೊತ್ತಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಕುಮಾರ ಸ್ವಾಮಿ ಹೇಳಿದ್ದಾರೆ.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಜೆಡಿಎಸ್ ಸಮಾವೇಶ ದಲ್ಲಿ ಮಾತನಾಡಿದ ಅವರು, ಬಿಜೆಪಿ- ಜೆಡಿಎಸ್ ನಿಂದ ಶಾಸಕರು ಬರುತ್ತಾರೆ ಎಂದು ಹೇಳುತ್ತಾರೆ. ನೀವು ಏನು ಮಾಡಿ ದ್ದೀರಿ? ಎಂದು ನಿಮ್ಮ ಜೊತೆ ಬರ್ತಾರೆ. ಆಪರೇಷನ್ ಕೋ ಆಪರೇಷನ್ ಅಂತಾರೆ. ನಾಚಿಕೆ ಆಗೋಲ್ಲವಾ? ಶಾಸಕರ ಮನೆ ಬಾಗಿಲಿಗೆ ಹೋಗಿ ಆಪರೇಷನ್ ಮಾಡ್ತಿದ್ದಾರೆ ಎಂದು ಡಿ.ಕೆ. ಶಿವಕುಮಾರ್ ಅವರ ಆಪರೇಷನ್ ಹಸ್ತದ ವಿರುದ್ದ ಕಿಡಿಕಾರಿದರು.

ಕಳೆದ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆ ಸರ್ಕಾರ ಮಾಡಲು ನಮ್ಮ ಕಾರ್ಯಕರ್ತರು ಒಪ್ಪಲಿಲ್ಲ. ಆದರೂ ನಾವು ಸರ್ಕಾರ ಮಾಡಿದ್ದೆವು. ಅವರ ಕಿರುಕುಳ ತಿಂದು ರೈತರ ಸಾಲಮನ್ನಾ ಮಾಡಿದೆ. ಆದರೂ ನನ್ನ ಸರ್ಕಾರ ತೆಗೆದರು. ಕಾಲ ಚಕ್ರ ಉರುಳುತ್ತದೆ. ಇನ್ನು 15 ವರ್ಷ ಕಾಂಗ್ರೆಸ್ ಸರ್ಕಾರ ಇರುತ್ತದೆ ಎನ್ನುತ್ತಾರೆ. ಹಿಂದೆಯೂ ಅನೇಕರು ಹೀಗೆ ಹೇಳಿದ್ದರು, ಆದರೆ ಏನಾಯ್ತು? ಎಂದು ಪ್ರಶ್ನಿಸಿದರು. 2006ರಲ್ಲಿ ದೇವೇಗೌಡರ ವಿರುದ್ಧವಾಗಿ ದೋಸ್ತಿ ನಿರ್ಧಾರ ಮಾಡಿದ್ದೆ. ಆದರೆ ಇಂದು ಅವರ ಒಪ್ಪಿಗೆ ಪಡೆದೇ ನಿರ್ಧಾರ ಮಾಡ್ತಿದ್ದೇನೆ. 2006 ರಲ್ಲಿ ಬಿಜೆಪಿಗೆ ಅಧಿಕಾರ ಕೊಡದೇ ಇರಲು ಕಾಂಗ್ರೆಸ್ ಪಕ್ಷದವರೇ ಕಾರಣ ಎಂದು ಆರೋಪಿಸಿದರು. ಸರ್ವಜನಾಂಗದ ಶಾಂತಿಯ ತೋಟ ನಮ್ಮ ನಿಲುವು. ಹೀಗಾಗಿ ನಾವು ಹೊಸ ಅಧ್ಯಾಯ ಪ್ರಾರಂಭ ಮಾಡ್ತಿದ್ದೇವೆ. 2006 ರಲ್ಲಿ ಆದ ಅಧ್ಯಾಯ ಮತ್ತೆ ಆಗಬೇಕು ಎಂದು ತೀರ್ಮಾನ ಮಾಡಿದ್ದೇವೆ. ನನ್ನ ಬದುಕನ್ನು ಆರೂವರೆ ಕೋಟಿ ಜನರಿಗೆ ಮೀಸಲು ಇಡುತ್ತೇನೆ ಎಂದು ಕುಮಾರಸ್ವಾಮಿ ಹೇಳಿದರು.

## ಜೆಡಿಎಸ್ ಉಳಿಯುತ್ತೆ, ಬೆಳೆಯುತ್ತೆ

### ಸಮಾವೇಶದಲ್ಲಿ ಭಾವುಕರಾದ ದೇವೇಗೌಡ

ಬೆಂಗಳೂರು, ಸೆ.10- ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಯನ್ನು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅಧಿಕೃತವಾಗಿ ಘೋಷಣೆ ಮಾಡಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿದ ಅವರು, ಪ್ರಧಾನಿ ನರೇಂದ್ರ ಮೋದಿ, ಅಮಿತ್ ಷಾ ನನಗೆ ಗೌರವ ಕೊಡುತ್ತಾರೆ. ಅವರಿಗೆ ನನ್ನ ನಡವಳಿಕೆ ಗೊತ್ತಿದೆ. ನನಗೆ ಇಷ್ಟು ಸೀಟು ಕೊಡಿ ಅಂತ ಕೇಳಿಲ್ಲ. ಪ್ರತಿ ಕ್ಷೇತ್ರದ ಬಗ್ಗೆ ವಿವರಿಸಿದ್ದೇನೆ. ಸೀಟು ಬಗ್ಗೆ ಕುಮಾರಸ್ವಾಮಿ ಕುಳಿತು ತೀರ್ಮಾನಿಸುತ್ತಾರೆ ಎಂದಿದ್ದಾರೆ.

**ಇಂಡಿಯಾ ಒಕ್ಕೂಟಕ್ಕೆ ಕನಿಷ್ಠ ಪಕ್ಷವೂ ಹೆಚ್.ಡಿ. ದೇವೇಗೌಡರಿಗೆ ಆಹ್ವಾನ ನೀಡಲಿಲ್ಲ. ನಿಮಗೆ ಯಾವ ನೈತಿಕತೆ ಇದೆ ದೇವೇಗೌಡರ ಬಗ್ಗೆ ಮಾತನಾಡಲು?. ಪಕ್ಷಕ್ಕೆ ದುಡಿದ ಕಾರ್ಯಕರ್ತರಿಂದ ಹಿಡಿದು ಚುನಾವಣೆಯಲ್ಲಿ ಸೋತಿರೋರನ್ನೂ ಮುಂದಿನ ದಿನಗಳಲ್ಲಿ ವಿಧಾನಸೌಧಕ್ಕೆ ಕರೆದುಕೊಂಡು ಹೋಗ್ತೀನಿ. ಯಾರನ್ನೂ ಕೈ ಬಿಡೋದಿಲ್ಲ. ಕಾಂಗ್ರೆಸ್ ಆಮಿಷಕ್ಕೆ ಒಳಗಾಗಬೇಡಿ ಎಂದು ಹೆಚ್.ಡಿ. ಕುಮಾರ ಸ್ವಾಮಿ ಹೇಳಿದರು.**

ನಾವ್ಯಾರು ದೇವರನ್ನು ಕಣ್ಣಿಂದ ನೋಡಿಲ್ಲ. ಆದರೆ ಈ ಚುನಾವಣೆ ಯಲ್ಲಿ ಜೆಡಿಎಸ್ ಉಳಿಯುತ್ತದೆ, ಬೆಳೆಯುತ್ತದೆ. ಕುಮಾರಸ್ವಾಮಿ ನಾಯಕತ್ವದಲ್ಲಿ ಮತ್ತೆ ಪಕ್ಷ ಬೆಳೆಯುತ್ತದೆ. ನೀವು ಕಾರ್ಯ ಕರ್ತರು ನಮ್ಮ ಪಕ್ಷದ ಶಕ್ತಿ. ನೀವು ಪಕ್ಷ ಉಳಿಸಬೇಕು ಎಂದು ಅವರು ಭಾವುಕರಾಗಿ ಮಾತನಾಡಿದರು.

ನಾನು ದೆಹಲಿಯಲ್ಲಿ ಬಿಜೆಪಿ ನಾಯಕರನ್ನು ಭೇಟಿಯಾಗಿದ್ದೆ. ನಾನು ಮತ್ತೆ ಪ್ರಧಾನಿ ಆಗೋಕೆ ಅಲ್ಲ. ಪಕ್ಷ ಉಳಿಸೋಕೆ ಭೇಟಿ ಆಗಿದ್ದೆ. ಆದರೆ ನಾನು ದೆಹಲಿಯಲ್ಲಿ ಅನೈತಿಕವಾಗಿ ಸಂಪರ್ಕ ಮಾಡಿದೆ ಎಂದು ಹೇಳುತ್ತಿದ್ದಾರೆ. ಈ ರಾಜ್ಯದಲ್ಲಿ ಯಾರಿಗೆ ನೈತಿಕತೆ ಇದೆ? ಯಾರಿಗೆ ಇಲ್ಲ ಅಂತ ವಿಶ್ಲೇಷಣೆ ಮಾಡಬಲ್ಲೆ. ಆದರೆ ನಾನು ವ್ಯಕ್ತಿಗತ ಟೀಕೆ ಮಾಡಲ್ಲ ಎಂದು ಕಾಂಗ್ರೆಸ್ ನಾಯಕರ ವಿರುದ್ಧ ದೇವೇಗೌಡ ಕಿಡಿಕಾರಿದರು.

# ಬಿಎಸ್ಸೆನ್ನೆಲ್ ಪುನರುಜ್ಜೀವನ ಅನಿವಾರ್ಯ : ಸಂಸದ ಸಿದ್ದೇಶ್ವರ



ದಾವಣಗೆರೆ, ಸೆ. 10- ಭಾರತದ ಉದ್ದಗಲಕ್ಕೂ ವಿಸ್ತರಿಸಿರುವ ಬಿಎಸ್ಸೆನ್ನೆಲ್ ಕಂಪನಿಯು ಗಡಿ ಮತ್ತು ಸೂಕ್ಷ್ಮ ವಲಯದಲ್ಲಿನ ಸೇವೆಗೆ ಹಾಗೂ ಗ್ರಾಮೀಣ ಭಾರತಕ್ಕೆ ಡಿಜಿಟಲ್ ಸೇವೆಗಳನ್ನು ಒದಗಿಸಲು ಅನಿವಾರ್ಯವಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ನಗರದಲ್ಲಿ ಮೊನ್ನೆ ನಡೆದ ದೂರವಾಣಿ ಸಲಹಾ ಸಮಿತಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅದೇ ರೀತಿ ಖಾಸಗಿ ಕಂಪನಿಗಳು ಏಕಪಕ್ಷೀಯವಾಗಿ ದರ ಏರಿಕೆ ಮಾಡದಂತೆ ತಡೆಯಲು ಕೂಡ ಸರ್ಕಾರಿ ಕಂಪನಿಯು ಮಾರುಕಟ್ಟೆಯಲ್ಲಿ ಜೀವಂತವಾಗಿರಬೇಕಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ನಷ್ಟದಲ್ಲಿರುವ ಬಿ.ಬಿಎಸ್ಸೆನ್ನೆಲ್ ಪುನರುಜ್ಜೀವನಕ್ಕಾಗಿ 89,047 ಕೋಟಿ ರೂ.ಗಳ ಮೂರನೇ ಪ್ಯಾಕೇಜನ್ನು ಘೋಷಣೆ ಮಾಡಿದೆ ಎಂದರು.

ಈ ಹಿಂದೆ ಘೋಷಣೆ ಮಾಡಿದ ಎರಡು ಪ್ಯಾಕೇಜ್‌ಗಳಿಂದ ಕಂಪನಿಯಲ್ಲಿ ಸ್ಥಿರತೆ ಮೂಡಿದೆ. 2021-22 ರ ಹಣಕಾಸು ವರ್ಷದಿಂದ ಬಿ.ಎಸ್.ಎನ್.ಎಲ್. ಸ್ವಲ್ಪಮಟ್ಟಿಗೆ ಚೇತರಿಕೆ ಕಂಡಿದೆ. ಆದಾಯವು 19,053 ಕೋಟಿಗಳಿಂದ 20,944 ಕೋಟಿಗೆ ಏರಿಕೆಯಾಗಿದೆ. ಸಾಲವೂ ಕೂಡ 32,944 ಕೋಟಿಗಳಿಂದ 22,289 ಕೋಟಿ ರೂಗಳಿಗೆ ಕುಸಿದಿದೆ ಎಂದು ಹೇಳಿದರು.

ಬಿಎಸ್ಸೆನ್ನೆಲ್ ಪುನರುಜ್ಜೀವನಕ್ಕಾಗಿ ಸರ್ಕಾರ ಹಲವಾರು ಪ್ರಯತ್ನಗಳನ್ನು ಮಾಡಿದೆ. ಈ ಹಿಂದೆ ಸ್ಯಾಮ್ ಪಿತ್ರೋಡ ನೇತೃ ತ್ವದ ಸಮಿತಿಯು ಕಂಪನಿಯನ್ನು ಲಾಭದಾಯಕವಾಗಿಸಲು ಖಾಸಗಿ ವೃತ್ತಿಪರರನ್ನು ನೇಮಿಸಿಕೊಳ್ಳುವುದ ರಿಂದಾರಂಭಿಸಿ ಟವರ್ ನಿರ್ವಹಣೆಗೆ ಪ್ರತ್ಯೇಕ ಅಂಗಸಂಸ್ಥೆಯನ್ನು ಸ್ಥಾಪಿಸುವವರೆಗೆ ಹಲವಾರು ಶಿಫಾರಸ್ಸು ಮಾಡಿತ್ತು. ಇವೆಲ್ಲವೂ ಕೇವಲ ಸಲಹೆಗಳಾಗಿಯೇ ಉಳಿದುಕೊಂಡವು ಜಾರಿಯಾಗಿರಲಿಲ್ಲ ಎಂದರು.

ದಾವಣಗೆರೆ ಟೆಲಿಕಾಂ ಜಿಲ್ಲೆ ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ನಷ್ಟದ ಪ್ರಮಾಣವನ್ನು ಕಡಿಮೆಗೊಳಿಸಿಕೊಂಡಿದೆ. ಒಟ್ಟಾರೆಯಾಗಿ ದಾವಣಗೆರೆ ಟೆಲಿಕಾಂ ಜಿಲ್ಲೆಯನ್ನೊಳಗೊಂಡಂತೆ ಬಿಎಸ್ಸೆನ್ನೆಲ್ ಹುಬ್ಬಳ್ಳಿ ಬ್ಯುಸಿನೆಸ್ ಏರಿಯಾ ಸಾಕಷ್ಟು ನಷ್ಟದಲ್ಲಿ ನಡೆಯುತ್ತಿರುವುದು ಬೇಸರದ ಸಂಗತಿಯಾಗಿದೆ ಎಂದರು.

ಹೊನ್ನಾಳಿ ತಾಲ್ಲೂಕಿನ ಎಂ. ಹನುಮನಹಳ್ಳಿ, ಕೆಂಗಲಹಳ್ಳಿ, ಫಲವನಹಳ್ಳಿ, ಚನ್ನಗಿರಿ ತಾಲ್ಲೂಕಿನ ಮುಗಳಿಹಳ್ಳಿ, ಗುಡ್ಡದಕೊಮಾರನಹಳ್ಳಿ, ರಾಜಗೊಂಡನಹಳ್ಳಿ ತಾಂಡ, ಬುಸ್ಸೇನಹಳ್ಳಿ, ನೆಲ್ಲಿಹಂಕ್ಲು, ಹೆಬ್ಬಳಗೆರೆ, ಅಗರಬನ್ನಿಹಟ್ಟಿ, ಜಮ್ಮಾಪುರ, ಹಾಗೂ ಹರಪನಹಳ್ಳಿ ತಾಲ್ಲೂಕಿನ ಒಳತಾಂಡ ಹಾಗೂ ಜಿಟ್ಟಿನಕಟ್ಟೆ ಗ್ರಾಮಗಳಲ್ಲಿ ಬಿಸ್ಸೆನ್ನೆಲ್ ಸಿಗ್ನಲ್ ಅಲಭ್ಯತೆಯ ಕುರಿತು ಸಚಿವರ ಗಮನ ಸೆಳೆದ ಪರಿಣಾಮವಾಗಿ ಬಿ.ಎಸ್.ಎನ್.ಎಲ್. ವತಿಯಿಂದ ಈ ಗ್ರಾಮಗಳಲ್ಲಿ ಟವರ್ ಅಳವಡಿಸಲು ಸರ್ವೆ ನಡೆಸುತ್ತಿರುವುದಾಗಿ ಜನರಲ್ ಮ್ಯಾನೇಜರ್ ತ್ರಿಪಾಠಿ ಸಭೆಗೆ ತಿಳಿಸಿದರು. ಬರುವ ಡಿಸೆಂಬರ್ ವೇಳೆಗೆ ಬಿಎಸ್ಸೆನ್ನೆಲ್ 4 ಜಿ ಸೇವೆ ಒದಗಿಸುವುದಾಗಿ ತ್ರಿಪಾಠಿ ತಿಳಿಸಿದರು.

ಬಿಎಸ್ಸೆನ್ನೆಲ್ ನ್ಯೂನ್ಯತೆಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ದೂರವಾಣಿ ಸಲಹಾ ಸಮಿತಿ ಸದಸ್ಯರು ಸಂಸದರ ಗಮನಕ್ಕೆ ತಂದರು. ಗ್ರಾಮ ಪಂಚಾಯತಿಗಳಿಗೆ ಒದಗಿಸಿರುವ ಬ್ರ್ಯಾಡ್‌ಬ್ಯಾಂಡ್ ಸಂಪರ್ಕ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಇದರಿಂದಾಗಿ ಗ್ರಾಮಪಂಚಾಯತಿಗಳಲ್ಲಿ ಕೆಲಸ ಮಾಡುವುದು ಕಷ್ಟವಾಗಿದೆ ಎಂದು ಸದಸ್ಯರು ದೂರಿದರು.

ಈ ಎಲ್ಲಾ ನ್ಯೂನ್ಯತೆಗಳನ್ನು 3 ತಿಂಗಳ ಒಳಗಾಗಿ ಸರಿಪಡಿಸುವುದಾಗಿ ಅಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ದೂರವಾಣಿ ಸಲಹಾ ಸಮಿತಿ ಸದಸ್ಯರುಗಳಾದ ಕಂದನಕೋವಿ ಹನುಮಂತಪ್ಪ, ರಾಜೇಶ್ ಕುರುಗೋಡ, ಗುಡ್ಡಪ್ಪ, ಅಸಗೋಡು ಸುರೇಶಗೌಡ್ರು, ಬಿ.ಎಸ್.ಎನ್.ಎಲ್. ಜನರಲ್ ಮ್ಯಾನೇಜರ್ ತ್ರಿಪಾಠಿ. ಸಬ್ ಡಿವಿಜನಲ್ ಇಂಜಿನಿಯರ್ ಗುರುಪ್ರಸಾದ್, ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮೋದಿ ನೀತಿಗಳಿಂದ ಶ್ರೀಮಂತರಿಗಷ್ಟೇ ಲಾಭ

**(1ನೇ ಪುಟದಿಂದ)** ಅವರು ಭಾನುವಾರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ರಾಜಸ್ಥಾನದಲ್ಲಿ ಈ ವರ್ಷಾಂತ್ಯ ದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಜಸ್ಥಾನದ ಟೋಂಕ್ ಜಿಲ್ಲೆಯ ನಿವಾಯಿಯಲ್ಲಿ ನಡೆದ ಕಾಂಗ್ರೆಸ್ ರ‍್ಯಾಲಿ ಉದ್ದೇಶಿಸಿ ಅವರು ಮಾತನಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ನೀತಿಗಳು ಬರೀ ಶ್ರೀಮಂತರಿಗಷ್ಟೇ ಲಾಭದಾಯಕವಾಗಿವೆಯೇ ಹೊರತು ಬಡವರಿಗಲ್ಲ.

ಬಡವರು ಮತ್ತು ಮಧ್ಯಮ ವರ್ಗದವರನ್ನು ನಿರ್ಲಕ್ಷಿಸಲಾಗಿದ್ದರೂ, ಅಧಿಕಾರದಲ್ಲಿರುವುದೇ ಬಿಜೆಪಿಯ ಏಕೈಕ ಗುರಿಯಾಗಿದೆ ಎಂದು ಪ್ರಿಯಾಂಕಾ ನೇರವಾಗಿ ಆರೋಪಿಸಿದರು.

ವಿದೇಶಕ್ಕೆ ತೆರಳಿ ವಾಪಸ್ ಬರುವ ಮೋದಿ, ನಮ್ಮ ಗೌರವ ಹೆಚ್ಚಿದೆ ಎಂದು ಹೇಳುತ್ತಾರೆ. ಬಳಿಕ ಅವರು ತಮ್ಮ ಉದ್ಯಮಿ ಸ್ನೇಹಿತರಿಗಾಗಿ ಒಪ್ಪಂದಗಳನ್ನು ಮಾಡಿಕೊಂಡು ಬಂದಿದ್ದಾರೆ ಎಂಬುದು ನಮಗೆ ತಿಳಿದು ಬರುತ್ತದೆ. ಅಂತೆಯೇ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಅಲ್ಲಿಂದಲೇ ವ್ಯಾಪಾರ ಕುದುರುತ್ತದೆ.

ಜನರ ಹಿತಾಸಕ್ತಿಗಳಿಗಿಂತಲೂ ಪ್ರಧಾನಿ ಉದ್ಯಮಿ ಸ್ನೇಹಿತರ ಹಿತಾಸಕ್ತಿಯತ್ತಲೇ ತಮ್ಮೆಲ್ಲ ಗಮನ ಹರಿಸುತ್ತಾರೆ ಎಂದೂ ದೂರಿದ್ದಾರೆ.


## S.J.P.V. VIDYAPEETHA

HARIHARA.



**WALK IN INTERVIEW**

S.J.V.P DEGREE COLLEGE HARIHAR.

| Sl.No. | Subject | No.of. Posts | Qualification |
|---|---|---|---|
| 01 | English | 02 | M. A & Ph. D/K-SET |
| 02 | Kannada | 02 | M. A & Ph. D/K-SET |
| 03 | Mathematics | 02 | M.Sc. & Ph.D/ K-SET |
| 04 | Computer Science | 02 | M.Sc. & Ph.D / K-SET |

Contact : Principal, S.J.V.P College, Harihar. 9663901541

Interview Date : 14-09-2023, Thursday, Time : 11.00A.M

Sri R.T. Prashanth
Secretary
S.J.P. V. Vidhyapeetha (R) Harihara

Sri D.M. Halaswamy
Vice-President
S.J.P. V. Vidhyapeetha (R) Harihara


## ರಾಣೇಬೆನ್ನೂರು ಶ್ರೀ ಸಿದ್ಧಾರೂಢ ಮಠದಲ್ಲಿ ಪುರಾಣ ಪ್ರವಚನ

ಹೊಸನಗರ ಶ್ರೀ ಗುರು ಕಬೀರಾನಂದ ಸ್ವಾಮಿ ಸಿದ್ಧಾಶ್ರಮದ ಶ್ರೀ ಸಿದ್ಧಾರೂಢ ಮಠದಲ್ಲಿ ಶ್ರಾವಣ ಮಾಸದ ಅಂಗವಾಗಿ ಶ್ರೀ ಸಿದ್ಧಾರೂಢ ಚರಿತ್ರೆ ಪುರಾಣ ಪ್ರವಚನವು ನಡೆಯುತ್ತಿದ್ದು, ಇದೇ ದಿನಾಂಕ 14ರವರೆಗೆ ನಡೆಯಲಿದೆ.

# ಜಗಳೂರು ತಾಲ್ಲೂಕಿನ ಭೋವಿ ಹಟ್ಟಿಗಳಿಗೆ ಮೂಲ ಸೌಕರ್ಯ ಕಲ್ಪಿಸಿ : ಡಿ. ಶ್ರೀನಿವಾಸ್



ಜಗಳೂರು, ಸೆ. 10- ದಶಕಗಳಿಂದ ಅಭಿವೃದ್ಧಿ ಇಲ್ಲದೇ ವಂಚಿತರಾಗಿರುವ ತಾಲ್ಲೂಕಿನ ಭೋವಿ ಹಟ್ಟಿಗಳಿಗೆ ಸಂಪರ್ಕ ರಸ್ತೆ, ಸಾರಿಗೆ ಸಂಚಾರ ಕಲ್ಪಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು ಎಂದು ವಕೀಲ ಡಿ. ಶ್ರೀನಿವಾಸ್ ಒತ್ತಾಯಿಸಿದರು.

ಪಟ್ಟಣದ ಭೋವಿ ಹಾಸ್ಟೆಲ್‌ನಲ್ಲಿ ನಡೆದ ತಾಲ್ಲೂಕು ಮಟ್ಟದ ಭೋವಿ ಸಮಾಜದ ಸಭೆಯಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಭೋವಿ ಸಮಾಜದ ಬಹುತೇಕರು ಭೂ ರಹಿತರಾಗಿದ್ದು, ಜೀವನ ನಿರ್ವಹಣೆಗಾಗಿ ದೂರದ ಕಾಫಿ ಸೀಮೆ ಅಥವಾ ದೊಡ್ಡ ನಗರಗಳಿಗೆ ಹಲವು ದಶಕಗಳಿಂದ ಸಾಮೂಹಿಕವಾಗಿ ಗುಳೇ ಹೋಗುವುದು ಸಾಮಾನ್ಯವಾಗಿದೆ. ಗುಳೇ ಪದ್ಧತಿಯಿಂದ ಭೋವಿ ಸಮುದಾಯದ ಮಕ್ಕಳು ಶಿಕ್ಷಣದಿಂದ ವಂಚಿತರಾಗುವಂತಾಗಿದೆ. ಗುಳೇ ನಿಯಂತ್ರಿಸುವ ನಿಟ್ಟಿನಲ್ಲಿ ಕೂಲಿ ಕಾರ್ಮಿಕರಿಗೆ ಕೆಲಸ ನೀಡಬೇಕು. ಭೋವಿ ಹಟ್ಟಿಗಳಿಗೆ ಎಲ್ಲಾ ರೀತಿಯ ಮೂಲ ಸೌಕರ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ತಾ.ಪಂ. ಮಾಜಿ ಅಧ್ಯಕ್ಷ ಬಿ.ಆರ್. ಅಂಜಿನಪ್ಪ ಮಾತನಾಡಿ, ಭೋವಿ ಸಮಾಜದಲ್ಲಿ ಜಾಗೃತಿ ಮೂಡಿಸುವ ಅಗತ್ಯತೆ ಇದೆ. ಸಮಾಜ ಸಂಘಟನೆಯಾಗಬೇಕಿದ್ದು, ಹೊಸದಾಗಿ ನೇಮಕವಾಗಿರುವ ಪದಾಧಿಕಾರಿಗಳು ಸಮಾಜದ ಏಳ್ಗೆಗೆ ಶ್ರಮಿಸಬೇಕು ಎಂದು ಹೇಳಿದರು.

ಭೋವಿ ಸಮಾಜದ ಮುಖಂಡರಾದ ಎಂ.ಆರ್. ಪುಟ್ಟಣ್ಣ, ಎ. ವೆಂಕಟೇಶ್, ಎಸ್.ವಿ. ಈರಪ್ಪ, ತುಪ್ಪದಹಳ್ಳಿ ದಾಸಪ್ಪ, ರಾಮಾಂಜನೇಯ, ಎ. ರಂಗನಾಥ, ಎಂ.ವಿ. ಶ್ರೀನಿವಾಸ್, ಬಿ. ತಿರುಮಲೇಶ್ ಇತರರು ಇದ್ದರು.

ಜಗಳೂರು ತಾಲ್ಲೂಕು ಭೋವಿ ಸಮಾಜಕ್ಕೆ ಈ ಸಂದರ್ಭದಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು.

**ಭೋವಿ ಸಮಾಜದ ನೂತನ ಪದಾಧಿಕಾರಿಗಳ ಆಯ್ಕೆ :** ಅಧ್ಯಕ್ಷರಾಗಿ ಅರ್ಜುನ್ ಪಲ್ಲಾಗಟ್ಟೆ, ಕಾರ್ಯದರ್ಶಿಯಾಗಿ ಎಂ.ವಿ. ಶ್ರೀನಿವಾಸ್, ಮುಸ್ಟೂರು ವಿರೂಪಾಕ್ಷಿ ಸಹ ಕಾರ್ಯದರ್ಶಿ, ಗೋವಿಂದಪ್ಪ ಉಪಾಧ್ಯಕ್ಷ, ಖಜಾಂಚಿಯಾಗಿ ರಂಗನಾಥ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಬೆಂಚಿಕಟ್ಟೆ ಗಂಗಾಧರ, ತಿಮ್ಮಾರೆಡ್ಡಿ, ರಾಜಪ್ಪ, ಚಿಕ್ಕಬನ್ನಿಹಟ್ಟಿ ನಾಗರಾಜ, ಮರಿಕಟ್ಟೆ ಪರಶುರಾಮ್, ವೀರೇಶ್, ಯರ್ಲಕಟ್ಟೆ ಸಂದೀಪ, ವೆಂಕಟೇಶ್, ಸಿ. ನಾಗರಾಜ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಗಂಗನರಸಿಯಲ್ಲಿ ಇಂದು - ನಾಳೆ ಶ್ರಾವಣ ಮಾಸದ ವಿಶೇಷ ಪೂಜೆ

ಹರಿಹರ ತಾಲ್ಲೂಕಿನ ಗಂಗನರಸಿ ಗ್ರಾಮದ ಶ್ರೀ ಗೋಣಿ ಬಸವೇಶ್ವರ ಮಠ ಹಾಗೂ ಶ್ರೀ ಹನುಮಂತ ದೇವರ ಜೀರ್ಣೋದ್ಧಾರ ಸಮಿತಿ ಆಶ್ರಯದಲ್ಲಿ ಶ್ರಾವಣ ಮಾಸದ ನಿಮಿತ್ಯ ಇಂದು ಮತ್ತು ನಾಳೆ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ.

ಇಂದು ಪ್ರಾತಃಕಾಲದಲ್ಲಿ ಗೋಣಿ ಬಸವೇಶ್ವರ ಹಾಗೂ ನಾಗದೇವತಾ ಸ್ವಾಮಿಗಳಿಗೆ ಅಭಿಷೇಕ ಹಾಗೂ ಪೂಜಾ ಮತ್ತು ಮಹಾಮಂಗಳಾರತಿ ನಡೆಯುವುದು. ನಂತರ 10.30 ಕ್ಕೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಸಂಜೆ ಭಜನಾ ಕಾರ್ಯಕ್ರಮ ನಡೆಯುವುದು.

ಪ್ರಸಾದದ ವ್ಯವಸ್ಥೆಯನ್ನು ನಿವೃತ್ತ ಉಪಕುಲಪತಿಗಳಾದ ದೀಟೂರು ಡಾ.ಹೆಚ್. ಮಹೇಶ್ವರಪ್ಪ ಹಾಗೂ ಮಕ್ಕಳು ನಡೆಸಿಕೊಡುವರು.

ನಾಳೆ ಮಂಗಳವಾರ ಬೆಳಿಗ್ಗೆ 9 ಗಂಟೆಯಿಂದ ಶ್ರೀ ಗೋಣಿ ಬಸವೇಶ್ವರ ಸ್ವಾಮಿಯ ಪಾಲಿಕೆ ಉತ್ಸವ ನಡೆಯುವುದು. ಉತ್ಸವದಲ್ಲಿ ಭಕ್ತಾದಿಗಳು ಕುರುಹು ಕೇಳುವ ಕಾರ್ಯಕ್ರಮ ನಡೆಯುವುದು ಎಂದು ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.


## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಶ್ರೀ ಪಿ.ಗಿರೀಶ್ ನಾಯ್ಕ ಬಿನ್ ಜಯದೇವ ನಾಯ್ಕ ಇವರಿಗೆ ಸೇರಿದ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳ ಮೂಲ (Original) ನೋಂದಾಯಿತ ಕ್ರಯಪತ್ರ ಹಾಗೂ ಸ್ವಾಧೀನ ರಹಿತ ಜಮೀನಿನ ಕ್ರಯದ ಕರಾರು ಪತ್ರಗಳು ಕಳೆದು ಹೋಗಿರುತ್ತವೆ.

ದಿನಾಂಕ 23-08-2023ರಂದು ಮಧ್ಯಾಹ್ನ ಸುಮಾರು 3-22 ಗಂಟೆಯ ಸಮಯದಲ್ಲಿ ಬಸ್ಸಿನ ಮೂಲಕ ಅರಸಿಕೆರೆ ಗ್ರಾಮದಿಂದ ದಾವಣಗೆರೆಗೆ ಬರುವ ಸಮಯದಲ್ಲಿ ಶ್ರೀಮತಿ ಪಿ. ಚೈತ್ರ ಕೋಂ ಪಿ. ಗಿರೀಶ್ ನಾಯ್ಕ ಇವರ ನಿವೇಶನಕ್ಕೆ ಸಂಬಂಧಿಸಿದ 1ನೇ ಷೆಡ್ಯೂಲ್ ಸ್ವತ್ತಿನ ಮೂಲ ಕ್ರಯಪತ್ರ ಹಾಗೂ ಶ್ರೀ ಟಿ. ಗಿರೀಶ್‌ನಾಯ್ಕ ತಂದೆ ಜಯದೇವ ನಾಯ್ಕ ಇವರಿಗೆ ಸಂಬಂಧಿಸಿದ 2ನೇ ಷೆಡ್ಯೂಲ್ ಸ್ವತ್ತಿನ ಸ್ವಾಧೀನರಹಿತ ಜಮೀನಿನ ಮೂಲ ಕ್ರಯದ ಕರಾರು ಪತ್ರಗಳು ಕಳೆದು ಹೋಗಿರುತ್ತವೆ. ಸದರಿ ನಿವೇಶನಕ್ಕೆ ಸೇರಿದ ಕ್ರಯಪತ್ರ ಹಾಗೂ ಜಮೀನಿಗೆ ಸೇರಿದ ಸ್ವಾಧೀನರಹಿತ ಕ್ರಯದ ಕರಾರು ಪತ್ರಗಳನ್ನು ಸಾಕಷ್ಟು ಹುಡುಕಿದರೂ ಎಲ್ಲಿಯೂ ಸಿಕ್ಕಿರುವುದಿಲ್ಲ.

ಸದರಿ ಕ್ರಯಪತ್ರ ಮತ್ತು ಸ್ವಾಧೀನರಹಿತ ಜಮೀನಿನ ಕ್ರಯದ ಕರಾರು ಪತ್ರಗಳು ಯಾರಿಗಾದರೂ ಸಿಕ್ಕಲ್ಲಿ ಕೆಳಕಂಡ ವಿಳಾಸಕ್ಕಾಗಲೀ ಅಥವಾ ಕೆಳಗೆ ತಿಳಿಸಿರುವ ಮೊಬೈಲ್ ನಂಬರ್‌ಗಳಿಗಾಗಲೀ ತಿಳಿಸಲು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಷೆಡ್ಯೂಲ್ :** 1) ಶ್ರೀಮತಿ ಪಿ.ಚೈತ್ರ ಕೋಂ ಪಿ. ಗಿರೀಶ್‌ನಾಯ್ಕ ಇವರಿಗೆ ಸೇರಿದ ನಿವೇಶನದ ಕ್ರಯಪತ್ರ ಇದರ ಎಸ್.ಆರ್.ನಂ. 15464/2022-23, ದಿನಾಂಕ : 14-10-2022, ಸದರಿ ನಿವೇಶನದ ವಿಸ್ತೀರ್ಣ ಪೂ-ಪ 12.595 × ಉ-ದ 9.665 ಮೀಟರ್ ಇದ್ದು, ಸದರಿ ನಿವೇಶನವು ತೋಳಹುಣಸೆ ಗ್ರಾಮ ಪಂಚಾ ಯಿತಿಗೆ ಒಳಪಟ್ಟಿರುವ ಸೈಟ್ ನಂ. 4, ಸ್ವತ್ತಿನ ಸಂಖ್ಯೆ 151/4 ಇದಕ್ಕೆ ಚೆಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ.4, ಪಶ್ಚಿಮಕ್ಕೆ: 3 ಮೀಟರ್ ಕಾಲುದಾರಿ, ಉತ್ತರಕ್ಕೆ: 9 ಮೀಟರ್ ಅಗಲದ ರಸ್ತೆ ಮತ್ತು ದಕ್ಷಿಣಕ್ಕೆ: ಸೈಟ್ ನಂ.5 ಮತ್ತು

2. ಶ್ರೀ ಪಿ.ಗಿರೀಶ್ ನಾಯ್ಕ ಬಿನ್ ಜಯದೇವನಾಯ್ಕ ಇವರಿಗೆ ಸೇರಿದ ಸ್ವಾಧೀನ ರಹಿತ ಜಮೀನಿನ ಕ್ರಯದ ಕರಾರು ಪತ್ರ, ಇದರ ಎಸ್.ಆರ್.ನಂ. 2835/2019-20, ದಿನಾಂಕ:09-10-2019, ಸದರಿ ಜಮೀನಿನ ವಿಸ್ತೀರ್ಣ 02 ಎಕರೆ, 72 ಸೆಂಟ್ಸ್, ರಿ.ಸರ್ವೆ ನಂ.133/ಡಿ, ಸದರಿ ಜಮೀನಿಗೆ ಚೆಕ್ಕುಬಂದಿ; ಪೂರ್ವಕ್ಕೆ: ಐ.ಬೀಬಿಜಾನ್ ಇವರ ಜಮೀನು, ಪಶ್ಚಿಮಕ್ಕೆ : ಖಾಜಾ ಮಹ್ಮದ್ ಇವರ ಜಮೀನು. ಉತ್ತರಕ್ಕೆ: ಈಡಿಗರ ಮಂಜಪ್ಪ ಇವರ ಜಮೀನು, ದಕ್ಷಿಣಕ್ಕೆ: ಓಂಕಾರಶೆಟ್ಟಿ ಇವರ ಜಮೀನು.

*ಸಂಪರ್ಕಿಸುವ ವಿಳಾಸ ಹಾಗೂ ಮೊಬೈಲ್ ನಂಬರ್ :*

**ಶ್ರೀ ಪಿ.ಗಿರೀಶ್ ನಾಯ್ಕ ಬಿನ್ ಜಯದೇವನಾಯ್ಕ,**
**ವಾಸ: ಪೂಲಹಳ್ಳಿ ತಾಂಡ (ತೌಡೂರು ತಾಂಡ),**
ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ.
**ಮೊಬೈಲ್ ನಂ. : 8970314177**
**ದಾವಣಗೆರೆ,**
**ದಿನಾಂಕ : 02-09-2023.**

ವಕೀಲರು
**ಎನ್. ಶ್ರೀನಿವಾಸ,** B.Sc.,LL.B.,
KAR No: 3406/99
# 2345/4, ಶ್ರೀ ವೆಂಕಟೇಶ್ವರ ನಿಲಯ,
ಹೆಚ್.ಕೆ.ಆರ್ ಸರ್ಕಲ್, ನಿಟುವಳ್ಳಿ, ದಾವಣಗೆರೆ-04.
Mob: **9448109415, 7813035464**
E-mail: nsrinivasarehalli068@gmail.com



## ಹೊನ್ನಾಳಿ ಅರ್ಬನ್ ಕ್ರೆಡಿಟ್ ಕೋ-ಆಪ್.ಸೊಸೈಟಿ. ಲಿ.,

ನ್ಯಾಮತಿ ರಸ್ತೆ, (ಹೊಸಕೇರಿ ಹಿಂಭಾಗದ ರಸ್ತೆ) ಪೆಟ್ರೋಲ್ ಬಂಕ್ ಎದುರು,
ಹೊನ್ನಾಳಿ. ದಾವಣಗೆರೆ (ಜಿಲ್ಲೆ)
ರಿ.ನಂ.ಡಿ.ಆರ್.ಡಿ.ವಿ.ಜಿ.ಆರ್.ಎಸ್.ಆರ್. /12/25759/99-2000

### ಪ್ರಕಟಣೆ

### ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಮಹಾಸಭೆಯ ತಿಳುವಳಿಕೆ ಪತ್ರ

ಈ ಮೇಲ್ಕಂಡ ಸಹಕಾರ ಸಂಘದ 24ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ: 24.09.2023ನೇ ಭಾನುವಾರದಂದು ಬೆಳಗ್ಗೆ 11.00 ಗಂಟೆಗೆ ಶ್ರೀ ಚನ್ನಪ್ಪಸ್ವಾಮಿ ಸಮುದಾಯ ಭವನ ಹಿರೇಕಲ್ಮಠ, ಹೊನ್ನಾಳಿಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀಯುತ ಡಾ॥ ಹೆಚ್.ಪಿ. ರಾಜ್‌ಕುಮಾರ್ ಇವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸಂಘದ ಅರ್ಹ ಸದಸ್ಯರು ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗಲು ಈ ಮೂಲಕ ಕೋರುತ್ತಿದ್ದೇವೆ.

ಈ ಕುರಿತು ಪ್ರತಿ ಅರ್ಹ ಸದಸ್ಯರುಗಳಿಗೂ ಅವರ ನೋಂದಾಯಿತ ಅಂಚೆ ವಿಳಾಸಕ್ಕೆ ತಿಳುವಳಿಕೆ ಪತ್ರವನ್ನು ಅಂಚೆ ಮೂಲಕ ಕಳಿಸಿಕೊಡಲಾಗಿದೆ. ಒಂದು ವೇಳೆ ಕಾರಣಾಂತರಗಳಿಂದ ಸದರಿ ತಿಳುವಳಿಕೆ ಪತ್ರ ಇದುವರೆಗೂ ಯಾರಿಗೆ ತಲುಪಿರುವುದಿಲ್ಲವೋ ಅವರುಗಳು ಇದೇ ತಿಳುವಳಿಕೆ ಪತ್ರ ಎಂದು ಭಾವಿಸಿ ಸಭೆಗೆ ಆಗಮಿಸಲು ಕೋರಲಾಗಿದೆ.

**ವಿಶೇಷ ಸೂಚನೆಗಳು:**

1. ಸಭೆಯಲ್ಲಿ ಚರ್ಚೆಗೆ ತರಬಹುದಾದ ವಿಷಯಗಳನ್ನು ಸದಸ್ಯರು ಲಿಖಿತ ರೂಪದಲ್ಲಿ ದಿನಾಂಕ:16.09.2023ನೇ ಶನಿವಾರ ಮಧ್ಯಾಹ್ನ 1.00 ಗಂಟೆಯೊಳಗೆ ಸಂಘಕ್ಕೆ ತಲುಪುವಂತೆ ಕಳುಹಿಸತಕ್ಕದ್ದು.
2. ಸಭೆಗೆ ಆಗಮಿಸುವಾಗ ಈ ನೋಟೀಸ್ ಪುಸ್ತಕವನ್ನು ತಪ್ಪದೇ ಸಭೆಗೆ ತರಬೇಕು.
3. ಪ್ರತಿ ವರ್ಷದ ಷೇರು ಲಾಭಾಂಶವನ್ನು ಘೋಷಣೆ ಮಾಡಲಾದ ದಿನಾಂಕದಿಂದ 3 ವರ್ಷದೊಳಗೆ ಪಡೆಯತಕ್ಕದ್ದು. ತಪ್ಪಿದಲ್ಲಿ ಸಂಘದ ಬೈಲಾ ರೀತ್ಯ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.
4. ಸದಸ್ಯರ ವಿಳಾಸ ಬದಲಾಗಿದ್ದಲ್ಲಿ ಬದಲಾದ ವಿಳಾಸವನ್ನು ಸಂಘದ ಕಛೇರಿಯಲ್ಲಿ ತಿಳಿಸಿ ನೋಂದಾಯಿಸಿಕೊಳ್ಳತಕ್ಕದ್ದು.
5. ಪ್ರತಿಯೊಬ್ಬ ಸದಸ್ಯರು ತಿದ್ದುಪಡಿ ಕಾಯ್ದೆ ಅನ್ವಯ ನಿರ್ದೇಶಕರ ಮಂಡಳಿ ನಿಗದಿಪಡಿಸಿದ ಕನಿಷ್ಠ ರೂ 3000/- ಮೊಬಲಗಿನ ವ್ಯವಹಾರವನ್ನು ಪ್ರತಿ ವರ್ಷ ಮಾಡಲೇಬೇಕು.
6. ಈ ಹಿಂದಿನ 5 ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ 2 ಮಹಾಸಭೆಗಳಿಗೆ ಹಾಜರಾಗುವುದು ಕಡ್ಡಾಯವಾಗಿರುತ್ತದೆ.
7. ಸಂಘದ ಸದಸ್ಯರ ಮಕ್ಕಳು 2022-23ನೇ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ, ಅಂತಿಮ ಪದವಿ ತರಗತಿಗಳಲ್ಲಿ, ಸ್ನಾತಕೊತ್ತರ ತರಗತಿಯಲ್ಲಿ ಹಾಗೂ ವೃತ್ತಿಪರ ತರಗತಿಗಳ ಅಂತಿಮ ವರ್ಷದ ತರಗತಿಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ್ದರೆ ಅಂತಹ ಮಕ್ಕಳ ದೃಢೀಕೃತ ಅಂಕಪಟ್ಟಿಯನ್ನು ದಿನಾಂಕ: 16.09.2023ರೊಳಗೆ ಕಛೇರಿಗೆ ತಲುಪಿಸಬೇಕು. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಮಹಾಸಭೆಯಲ್ಲಿ ಪುರಸ್ಕರಿಸಲಾಗುವುದು.
8 'ಎ' ತರಗತಿಯ ಎಲ್ಲಾ ಸದಸ್ಯರುಗಳು ಪ್ರತಿ ವರ್ಷವೂ ಕನಿಷ್ಠ ರೂ 3000/- ಗಳ ಮೊಬಲಗಿನ ವ್ಯವಹಾರ ಮಾಡದಿದ್ದಲ್ಲಿ ಹಾಗೂ 5 ವರ್ಷಗಳ ಮಹಾಸಭೆಗಳ ಪೈಕಿ ಕನಿಷ್ಠ 2 ಮಹಾಸಭೆಗಳಿಗೆ ಹಾಜರಾಗದಿದ್ದಲ್ಲಿ ಅಂತಹ ಸದಸ್ಯರು ಸಂಘದ ಚುನಾವಣೆಯಲ್ಲಿ ಸ್ಪರ್ಧಿಸುವ ಮತ್ತು ಮತದಾನ ಮಾಡುವ ಹಕ್ಕನ್ನು ಕಳೆದುಕೊಳ್ಳುವರು.

**ಸಹಿ/- ಕುಮಾರ್**
**ಮುಖ್ಯ ಕಾರ್ಯನಿರ್ವಹಣಾಧಿಕಾರಿ**

**ಸಹಿ/- ವೀರೇಶಪ್ಪ. ಹೆಚ್**
**ಉಪಾಧ್ಯಕ್ಷರು**

**ಸಹಿ/- ಡಾ॥ ಹೆಚ್.ಪಿ. ರಾಜ್ ಕುಮಾರ್**
**ಅಧ್ಯಕ್ಷರು**

# ಧರ್ಮಸ್ಥಳ ಟ್ರಸ್ಟ್‌ನ ಯೋಜನೆಗಳು ಸಮಾಜಕ್ಕೆ ಶಕ್ತಿ ನೀಡುತ್ತವೆ

ಹರಿಹರ, ಸೆ. 10 - ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥೇಶ್ವರ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್ ವತಿಯಿಂದ ನಡೆಯುವ ಎಲ್ಲಾ ಕಾರ್ಯಕ್ರಮಗಳು ಸಮಾಜಕ್ಕೆ ಶಕ್ತಿ ನೀಡುತ್ತಿವೆ ಎಂದು ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶ್ರೀ ಶಾರದೇಶಾನಂದಜೀ ಮಹಾರಾಜ್ ಅಭಿಪ್ರಾಯಪಟ್ಟರು.



ನಗರದ ಚಿಂತಾಮಣಿನಗರ ಶ್ರೀ ಸತ್ಯಗಣಪತಿ ದೇವಸ್ಥಾನ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ಹಾಗೂ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟಗಳು ಗಾಂಧಿನಗರ ವಲಯದ ವತಿಯಿಂದ ನಡೆದ ಸಾಮೂಹಿಕ ಶ್ರೀ ವರಮಹಾಲಕ್ಷ್ಮಿ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ಧರ್ಮಸ್ಥಳ ಟ್ರಸ್ಟ್ ನಾಡಿನ ಎಲ್ಲಾ ಜಾತಿಯವರನ್ನೊಳಗೊಂಡ ವಿವಿಧತೆಯಲ್ಲಿ ಏಕತೆ ಸಾರುವ ಅನೇಕ ಸಮಾಜ ಮುಖಿ ಕಾರ್ಯಗಳನ್ನು ಮಾಡುತ್ತಿದೆ. ಜನರಲ್ಲಿ ಭಕ್ತಿಯ ಭಾವನೆಗಳು ಹೆಚ್ಚಾಗುವುದರ ಜೊತೆಗೆ ಸಂಘಟನೆಗೆ ಶಕ್ತಿ ತುಂಬುತ್ತಿದೆ ಎಂದು ಹೇಳಿದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಧರ್ಮಸ್ಥಳ ಟ್ರಸ್ಟ್ ಕಾರ್ಯಕ್ರಮಗಳು ಅಸಂಘಟಿತರು ಹಾಗೂ ಮಹಿಳೆಯರು ಸ್ವಾಲವಂಬಿ ಜೀವನ ನಡೆಸಲು ನೆರವಾಗುತ್ತಿವೆ ಎಂದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ಮನೆಯಲ್ಲಿ ಪೋಷಕರು ಮಕ್ಕಳಿಗೆ ನೀಡುವ ಸಂಸ್ಕಾರದಿಂದ ಸಮಾಜ ಸುಧಾರಣೆಯಾಗುತ್ತದೆ ಎಂದರು.

ಉದ್ಯಮಿ ಮತ್ತು ಸತ್ಯಗಣಪತಿ ದೇವಸ್ಥಾನದ ಧರ್ಮದರ್ಶಿ ಎಂ.ಆರ್. ಸತ್ಯನಾರಾಯಣ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಧರ್ಮಸ್ಥಳ ಸಂಘದ ಜಿಲ್ಲಾ ನಿರ್ದೇಶಕ ವಿ. ವಿಜಯಕುಮಾರ್ ಮಾತನಾಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಸ್ಥೆಯ ತಾಲ್ಲೂಕು ಯೋಜನಾಧಿಕಾರಿ ಗಣಪತಿ ಮಾಳಂಜೆ ಇನ್ನೊಬ್ಬರ ಸಂಕಷ್ಟಕ್ಕೆ, ನೆರವು ನೀಡುವುದೇ ಧರ್ಮ ಎಂದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ನಿಂಬಕ್ಕ ಚಂದಪೂರ್, ಕಿರಣ್ ಭೂತೆ, ರಾಜು ರೋಖಡೆ, ಪೂಜೆ ವ್ಯವಸ್ಥಾಪಕರಾದ ನಯನ, ಮೃತ್ಯುಂಜಯ, ಮೇಲ್ವಿಚಾರಕಿ ಶ್ವೇತಾ ಬಿ, ಮಂಜುಳಾ, ಕೊಟ್ರೇಶ್ ರಾಧಾ ಜೋಶಿ, ಶಾಂತಮ್ಮ ಆಶಾ ಗುತ್ತೂರು, ಸುಧಾ, ವಿಜಯಶ್ರೀ, ಮಾಲನ್ ಬಿ. ಹೀನಾ, ಗಂಗಮ್ಮ, ರೇಣುಕಮ್ಮ, ಶಿವಾನಂದ, ಶಾಂತಮ್ಮ, ಮೈಲಮ್ಮ, ರಾಧ, ಕವಿತಾ, ಲಕ್ಷ್ಮಮ್ಮ, ಸುಮಾ, ನೀಲಮ್ಮ, ಲತಾ, ಶೋಭಾ, ಉಮಾ, ಆಶ್ವಿನಿ, ಕಮಲಮ್ಮ, ಬಸಮ್ಮ, ಗೀತಾಬಾಯಿ, ಸಾವಿತ್ರ, ಪರಶುರಾಮ್ ಮತ್ತಿತರರು ಉಪಸ್ಥಿತರಿದ್ದರು.

# ನೆಲ, ಜಲ, ಭಾಷೆಯ ಸೌಲಭ್ಯ ವಂಚಿತ ಕನ್ನಡಿಗರ ಹೋರಾಟ ಅವಶ್ಯ

### ರಾಣೇಬೆನ್ನೂರಿನಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ರಾಜ್ಯಾಧ್ಯಕ್ಷ ಪಿ. ಕೃಷ್ಣೇಗೌಡ

ರಾಣೇಬೆನ್ನೂರು, ಸೆ,10- ನಾಡಿನ ನೆಲ, ಜಲ ಹಾಗೂ ಭಾಷೆಯ ರಕ್ಷಣೆ ಜೊತೆ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವ ಕನ್ನಡಿಗರ ಪರವಾಗಿ ಹೋರಾಟ ಮಾಡಬೇಕಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ರಾಜ್ಯಾಧ್ಯಕ್ಷ ಪಿ. ಕೃಷ್ಣೇಗೌಡ ಹೇಳಿದರು.



ಇಲ್ಲಿನ ಮೃತ್ಯುಂಜಯ ಕಲ್ಯಾಣ ಮಂಟಪದಲ್ಲಿಂದು ನಡೆದ ರಾಜ್ಯ ಕಾರ್ಯಕಾರಿಣಿ ಚಿಂತನ ಮಂಥನ ಬೃಹತ್ ಸಮಾವೇಶದ ಉದ್ಘಾಟನೆ ಮಾಡಿ ಅವರು ಮಾತನಾಡಿದರು.

ಅಧಿಕಾರಿಗಳು ಸರ್ಕಾರದ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿ ಕಟ್ಟಕಡೆಯ ಕನ್ನಡಿಗನನ್ನು ಮುನ್ನೆಲೆಗೆ ತರುವ ಕೆಲಸವಾಗಿಲ್ಲ. ನನಗೆ ಮಂತ್ರಿ ಗೊತ್ತು, ಅಧ್ಯಕ್ಷ ಗೊತ್ತು ಎಂದು ಧಮಕಿ ಹಾಕುವ ಅಧಿಕಾರಿಗಳು, ಶಿಕ್ಷಕರು ಕಂಡು ಬರುತ್ತಿದ್ದಾರೆ. ಅಂಥವರ ಬಗ್ಗೆ ಜನಪ್ರತಿನಿಧಿಗಳು ಯೋಗ್ಯ ಕ್ರಮ ಜರುಗಿಸಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ಪ್ರವೇಶಿಸಿದೆ. ಜನರ ಸ್ವಾಭಿಮಾನಕ್ಕೆ ದಕ್ಕೆ ತರುವ ಇಂತವರ ಬಗ್ಗೆ ನಮ್ಮ ಬಣ ತೀವ್ರತರದ ಹೋರಾಟ ನಡೆಸಲಿದೆ ಎಂದು ಕೃಷ್ಣೇಗೌಡ ಎಚ್ಚರಿಸಿದರು.

ಬಸವರಾಜ ಬೊಮ್ಮಾಯಿ ಈ ಭಾಗದ ಅದರಲ್ಲೂ ಹಾವೇರಿ ಜಿಲ್ಲೆಯನ್ನು ಪ್ರತಿನಿಧಿಸಿದರೂ ಸಹ ಹೇಳಿಕೊಳ್ಳುವಂತಹ ಅಭಿವೃದ್ಧಿ ಮಾಡಲಿಲ್ಲ. ನಾನು ಕಂಡಂತೆ ಉತ್ತರ ಕರ್ನಾಟಕ ಅಭಿವೃದ್ಧಿಯಲ್ಲಿ ಬಹಳಷ್ಟು ವಂಚನೆಗೀಡಾಗಿದೆ. ಇಲ್ಲಿನ ಜನಪ್ರತಿನಿಧಿಗಳು ಆ ಬಗ್ಗೆ ಹೆಚ್ಚಿನ ಚಿಂತನೆ ಮಾಡಿಲ್ಲ. ನಮ್ಮ ಬಣ ಈ ಬಗ್ಗೆ ಇಂದು 'ಚಿಂತನ ಮಂಥನ' ಮಾಡಿ ಸರ್ಕಾರದ ಗಮನ ಸೆಳೆಯಲಾಗುವುದು ಎಂದು ಕೃಷ್ಣೇಗೌಡ ಹೇಳಿದರು.

ಸಮಾವೇಶದ ಸಾನ್ನಿಧ್ಯ ವಹಿಸಿದ್ದ ಶನೇಶ್ವರ ಮಠದ ಶ್ರೀ ಶಿವಯೋಗಿ ಶಿವಾಚಾರ್ಯ ಮತ್ತು ಬಂಕಾಪೂರ ಅರಳೆಲೆ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ದ್ವಯರು ಕನ್ನಡಿಗರ ಪರ ಧ್ವನಿ ಎತ್ತುವ ಈ ಸಂಘಟನೆಯ ಕಾರ್ಯಗಳಿಂದ ನಾಡಿನ ಸರ್ವತೋಮುಖ ಅಭಿವೃದ್ಧಿ ಆಗಲಿ ಎಂದು ಶುಭಾಶೀರ್ವಾದ ಮಾಡಿದರು.

ರಾಜ್ಯದ ಎಲ್ಲ ಜಿಲ್ಲೆಗಳ ಜಿಲ್ಲಾಧ್ಯಕ್ಷರು, ರಾಜ್ಯ ಕಾರ್ಯಕಾರಿ ಸಮಿತಿ ಹಾಗೂ ತಾಲ್ಲೂಕು ಸದಸ್ಯರು, ಮತ್ತಿತರರು ಭಾಗವಹಿಸಿದ್ದ ಕನ್ನಡಾಂಬೆಯ ಮೆರವಣಿಗೆ ಇಲ್ಲಿನ ಕೆಇಬಿ ಗಣೇಶ ದೇವಸ್ಥಾನದಿಂದ ಹೊರಟು ಸಮಾವೇಶದ ಸ್ಥಳ ಮೃತ್ಯುಂಜಯ ಕಲ್ಯಾಣ ಮಂಟಪಕ್ಕೆ ಆಗಮಿಸಿತು. ಮೆರವಣಿಗೆಯಲ್ಲಿ ಜಾನಪದ ಕಲಾತಂಡಗಳು, ಕನ್ನಡ ಧ್ವಜಗಳೊಂದಿಗೆ ಕುಣಿದು, ಕುಪ್ಪಳಿಸಿದರು.



## ಜೈನ್ ಲೇಔಟ್‌ನಲ್ಲಿ ಶಿಕ್ಷಕರ ದಿನಾಚರಣೆ

ದಾವಣಗೆರೆ, ಸೆ. 10- ನಗರದ ಜೈನ್ ಲೇಔಟ್ ನಲ್ಲಿ ಶಿಕ್ಷಕರ ದಿನಾಚರಣೆ ಆಚರಿಸಲಾಯಿತು. ಗೌರವಾಧ್ಯಕ್ಷರಾದ ಶ್ರೀಮತಿ ಶಶಿಕಲಾ ಬಡದಾಳ ಅವರಿಗೆ ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರೇಮಾ, ಗೀತಾ, ಕುಸುಮ, ಸರಸ್ವತಿ, ಜ್ಯೋತಿ ಕೆ., ಮಂಜುಳಾ ಉಪಸ್ಥಿತರಿದ್ದರು. ಜ್ಯೋತಿ ಎಂ. ಸನ್ಮಾನಿಸಿದರು. ಅಕ್ಷತಾ ಸ್ವಾಗತಿಸಿದರು. ಅನುಪಮ ವಂದಿಸಿದರು. ಐಶ್ವರ್ಯ ನಿರೂಪಿಸಿದರು.

## ಕುರಿಗಳ ಕಳ್ಳತನ

ದಾವಣಗೆರೆ, ಸೆ.10- ಆಂಜನೇಯ ಕಾಟನ್ ಮಿಲ್ ಕ್ವಾರ್ಟ್ರರ್ಸ್‌ನಲ್ಲಿ ನಾಗಿನಾಬಾಯಿ ಅವರಿಗೆ ಸೇರಿದ 1.40 ಲಕ್ಷ ರೂ. ಮೌಲ್ಯದ 7 ಕುರಿಗಳು ಕಳ್ಳತನವಾಗಿವೆ. ಮಂಗಳವಾರ ರಾತ್ರಿ ಈ ಘಟನೆ ನಡೆದಿದ್ದು, ಈ ಕುರಿತು ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

# ಬಿಜೆಪಿ ಯುವ ಮೋರ್ಚಾದಿಂದ ಉದಯನಿಧಿ ಸ್ಟ್ಯಾಲಿನ್ ವಿರುದ್ಧ ಪ್ರತಿಭಟನೆ, ಪ್ರತಿಕೃತಿ ದಹನ




ದಾವಣಗೆರೆ, ಸೆ.10- ಸನಾತನ ಧರ್ಮದ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿ ಹಿಂದೂಗಳ ಭಾವನೆಗಳಿಗೆ ಧಕ್ಕೆ ತಂದಿರುವುದನ್ನು ಖಂಡಿಸಿ, ತಮಿಳುನಾಡು ಸಚಿವ ಉದಯನಿಧಿ ಸ್ಟ್ಯಾಲಿನ್ ವಿರುದ್ಧ ಬಿಜೆಪಿ ಯುವ ಮೋರ್ಚಾ ವತಿಯಿಂದ ನಗರದ ಜಯದೇವ ವೃತ್ತದಲ್ಲಿ ಮೊನ್ನೆ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯಲ್ಲಿ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಮಾಜಿ ಸಚೇತಕ ಡಾ|| ಎ.ಹೆಚ್. ಶಿವಯೋಗಿಸ್ವಾಮಿ, ಮಹಾನಗರ ಪಾಲಿಕೆ ಸದಸ್ಯರುಗಳಾದ ಎಸ್. ಟಿ. ವೀರೇಶ್, ಬಿ.ಜೆ. ಅಜಯ್‌ಕುಮಾರ್, ಪ್ರಸನ್ನಕುಮಾರ್, ಶಿವಾನಂದ, ಮುಖಂಡರುಗಳಾದ ಎಲ್.ಎನ್. ಕಲ್ಲೇಶ್, ಚನ್ನಗಿರಿ ಶಿವಕುಮಾರ್, ವಿಶ್ವಾಸ್, ಮಹೇಂದ್ರ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಹಾಗೂ ಪಾಲಿಕೆ ಸದಸ್ಯರಾದ ಶಿವಪ್ರಕಾಶ್ ಆರ್.ಎಲ್., ಯಲ್ಲೇಶ್, ಶ್ರೀಧರ್, ಕಿರಣ್, ಚಂದ್ರು, ಕರ್ಜಗಿ, ಶಶಿಕುಮಾರ್, ರಾಕೇಶ್, ಭಜರಂಗಿ, ಸಚಿನ್ ವರ್ಣೇಕರ್, ಧನುಷ್, ಕೊಟ್ರೇಶ್, ಪ್ರದೀಪ್ ಸೇರಿದಂತೆ ಹಲವು ಕಾರ್ಯಕರ್ತರು ಉಪಸ್ಥಿತರಿದ್ದರು.

## ನಗರದ ಬಿಐಇಟಿಯಲ್ಲಿ ಇಂದು ಸ್ಟೂಡೆಂಟ್ ಇಂಡಕ್ಷನ್ ಪ್ರೋಗ್ರಾಮ್

ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪ್ರಥಮ ವರ್ಷದ ಮೊದಲನೇ ಸೆಮಿಸ್ಟರ್ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸ್ಟೂಡೆಂಟ್ ಇಂಡಕ್ಷನ್ ಪ್ರೋಗ್ರಾಮ್- 2023 ಶಿಬಿರವನ್ನು ಇಂದಿನಿಂದ ಇದೇ ದಿನಾಂಕ 16 ರವರೆಗೆ ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 10.30ಕ್ಕೆ ನಡೆಯುವ ಶಿಬಿರದ ಉದ್ಘಾಟನಾ ಸಮಾರಂಭವನ್ನು ಕಾಲೇಜಿನ ಎಸ್. ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದ್ದು, ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಭಾರತೀಯ ಬಾಹ್ಯಾಕಾಶ ಕೇಂದ್ರದ ಪ್ರೊ. ಯು.ಆರ್. ರಾವ್, ಸ್ಯಾಟಲೈಟ್ ಕೇಂದ್ರದ ವಿಜ್ಞಾನಿ ಮತ್ತು ಚಂದ್ರಯಾನ-3ರಲ್ಲಿ, ಪ್ರಮುಖ ಪಾತ್ರವಹಿಸಿದ ನಮ್ಮ ಕಾಲೇಜಿನ ಹಿರಿಯ ವಿದ್ಯಾರ್ಥಿ ಶಿವಕುಮಾರ್ ಎಸ್. ಪಾಟೀಲ್ ಮತ್ತು ಕಾಲೇಜಿನ ಪ್ರಾಚಾರ್ಯ ಡಾಮ ಎಚ್.ಬಿ. ಅರವಿಂದ್ ಭಾಗವಹಿಸುತ್ತಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ನಿರ್ದೇಶಕ ಪ್ರೊ ವೈ. ವೃಷಬೇಂದ್ರಪ್ಪ ವಹಿಸಲಿದ್ದಾರೆ.



# ಹರಿಹರದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

ಹರಿಹರ, ಸೆ. 10 – ಚುನಾವಣೆಯ ಸಮಯದಲ್ಲಿ ರೈತರಿಗೆ ಕೊಟ್ಟಿರುವ ಭರವಸೆಯನ್ನು ಈಡೇರಿಸಿಲ್ಲ. ರಾಜ್ಯ ಸರ್ಕಾರ ದುರಾಡಳಿತ ನಡೆಸಿದೆ ಎಂದು ಆರೋಪಿಸಿ ಬಿಜೆಪಿ ಪ್ರತಿಭಟಿಸಿದೆ.

ಈ ವೇಳೆ ಮಾತನಾಡಿದ ಶಾಸಕ ಬಿ.ಪಿ.ಹರೀಶ್, ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಕೆಲಸಗಳನ್ನು ಮಾಡದೇ ಕೇವಲ ಗ್ಯಾರಂಟಿ ಹೆಸರನ್ನು ಹೇಳಿಕೊಂಡು ನೂರು ದಿನಗಳನ್ನು ಪೂರೈಸಿದೆ. ಚುನಾವಣೆ ಸಮಯದಲ್ಲಿ ರೈತರಿಗೆ ಕೊಟ್ಟಿರುವ ಆಶ್ವಾಸನೆಗಳನ್ನು ಈಡೇರಿಸಿಲ್ಲ ಎಂದು ಆರೋಪಿಸಿದರು.

ರೈತರಿಗೆ ಸಮರ್ಪಕ ವಿದ್ಯುತ್ ಪೂರೈಸದೇ ಸಂಕಷ್ಟಕ್ಕೆ ದೂಡಿದೆ. ರೈತರಿಗೆ ನೀಡಲಾಗುತ್ತಿದ್ದ 4 ಸಾವಿರ ರೂ.ಗಳ ಪ್ರೋತ್ಸಾಹ ಧನ ನಿಲ್ಲಿಸಿದೆ. ಸಾರ್ವಜನಿಕರು ಸಮಸ್ಯೆಗಳಲ್ಲಿ ದಿನ ಕಳೆಯುವಂತೆ ಮಾಡಿದ್ದು, ಅಭಿವೃದ್ಧಿ ಶೂನ್ಯವಾಗಿದೆ ಎಂದರು.

ಪ್ರತಿಭಟನೆಯ ನಂತರ ತಹಶೀಲ್ದಾರ್ ಪೃಥ್ವಿ ಸಾನಿಕಂ ಅವರಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಹನುಮಂತಪ್ಪ, ಬಿಜೆಪಿ ಗ್ರಾಮೀಣ ಘಟಕದ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ತಾಪಂ ಮಾಜಿ ಅಧ್ಯಕ್ಷ ಅಣ್ಣಪ್ಪ ಐರಣಿ, ಮುಖಂಡರಾದ ರಾಜು ರೋಖಡೆ, ಬಾತಿ ಚಂದ್ರಪ್ಪ, ಕೆಂಚನಹಳ್ಳಿ ಮಹಾಂತೇಶಪ್ಪ, ಸುನಿಲ್, ರವಿರಾಯ್ಕರ್, ಕುಮಾರ್ ಧೂಳೆಹೊಳೆ, ರಾಚಪ್ಪ, ಗುರು ಮತ್ತಿತರರಿದ್ದರು.

## ನಗರದಲ್ಲಿ ಇಂದು ಕಾರ್ಯಾಗಾರ



ಗುರುದೇವ ಶ್ರೀ ರವಿಶಂಕರ್ ಅವರ ಆರ್ಟ್ ಆಫ್ ಲಿವಿಂಗ್ ಆಶ್ರಯದಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಸಂತೋಷದ ಕಾರ್ಯಾಗಾರ (ಸುದರ್ಶನ ಕ್ರಿಯೆ) ಡಾ. ಬಾಣಾಪುರಮಠ ಮಕ್ಕಳ ಆಸ್ಪತ್ರೆಯ ಮೇಲ್ಗಡೆ ಇಂದಿನಿಂದ ಇದೇ ದಿನಾಂಕ 16ರವರೆಗೆ ಬೆಳಿಗ್ಗೆ ಮತ್ತು ಸಂಜೆ 2 ಬ್ಯಾಚುಗಳಲ್ಲಿ ನಡೆಯಲಿದೆ.

ವಿವರಕ್ಕೆ ಸಂಪರ್ಕಿಸಿ : 99005 01877, 77601 55659.

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 45x48 South, 33x40 South, 33x40 North, 40x60 East.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಜಯನಗರದ ಹತ್ತಿರ ಶಿರಡಿ ಸಾಯಿಬಾಬಾ ದೇವಸ್ಥಾನದ ಹಿಂಭಾಗದಲ್ಲಿ 30x50 East, 30x50 East ಅಕ್ಕ-ಪಕ್ಕ, 60x50 East,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಜಯನಗರದ 'C' ಬ್ಲಾಕ್‌ನಲ್ಲಿ 30x50 ಪಶ್ಚಿಮ ಅಕ್ಕ-ಪಕ್ಕ, ಕುಂದವಾಡ ರಸ್ತೆ ಹತ್ತಿರ, ಬಸವೇಶ್ವರ ಲೇಔಟ್‌ನಲ್ಲಿ 30x50 ಪೂರ್ವ, ಅಕ್ಕ-ಪಕ್ಕ,
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x50 ಪಶ್ಚಿಮ ಹೊಸ ಮನೆ ಮೇಲೆ ಕೆಳಗೆ, ಕರ್ನಾಟಕ ಗೃಹ ಮಂಡಳಿಯಲ್ಲಿ 30x50 ಪೂರ್ವ ಹೊಸ ಮನೆ ಡುಪ್ಲೆಕ್ಸ್ ಹೌಸ್, ಶ್ರೀನಿವಾಸ ನಗರದಲ್ಲಿ 20x30 ಮನೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ರೂಂ ಬಾಡಿಗೆಗೆ ಇದೆ**
ರಂಗನಾಥ್ ಬಡಾವಣೆಯ 8ನೇ ಕ್ರಾಸ್‌ನ ಗಾರ್ಡನ್ ಗೇಟ್ ರೆಸ್ಟೋರೆಂಟ್ ಹಿಂದೆ 2ನೇ ಮಹಡಿಯಲ್ಲಿ ಅಟ್ಯಾಚ್ ಬಾತ್ ರೂಂ ಇರುವ ರೂಂ ಬಾಡಿಗೆಗೆ ಇದೆ. ಸಂಪರ್ಕಿಸಿ
88803 18884, 97424 37766, 99868 97209

**KHB ಯಲ್ಲಿ ಕರ್ನಾಟಕ ಗೃಹ ಮಂಡಳಿಯಲ್ಲಿ**
30x50 East ಮನೆ 60 ಲಕ್ಷಕ್ಕೆ, 40x60 North, 40x60 40x60 ಅಕ್ಕ-ಪಕ್ಕ South, 80 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಪ್ರತಿಷ್ಠಿತ ಕಾಲೇಜಿಗೆ ಹೌಸ್ ಕೀಪಿಂಗ್‌ಗೆ ಹುಡುಗರು ಬೇಕಾಗಿದ್ದಾರೆ.
99806 47014

**ಬನ್ನಿ ! ಆಸ್ವಾದಿಸಿ**
ನಿಮ್ಮ ನಮ್ಮ ಮೆಚ್ಚಿನ ಆತಿಥ್ಯ ಹೋಟೆಲ್ ನಲ್ಲಿ ಬೆಳಗಿನ ಉಪಹಾರ ಪ್ರಾರಂಭ ಉತ್ತಮ ನಾಣ್ಯತೆ ಮತ್ತು ದರ
Call : 08192-200404
Mob : 95131 93031

**ಜಮೀನು ಮಾರಾಟಕ್ಕಿದೆ**
NH4 ರಸ್ತೆಗೆ, ಪಿ.ಬಿ. ರಸ್ತೆಗೆ ಶಿವಮೊಗ್ಗ ರಸ್ತೆಗೆ, ಹರಪನಹಳ್ಳಿ ರಸ್ತೆಗೆ.
(Contact Buyers Only)
Sharma : 63608 66997

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಮತ್ತು ಆಯಾ ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
ಮೊ : 98450-35710

**HOTEL JOBS**
ಸಪ್ಲೈ, ಕ್ಲೀನಿಂಗ್ ಮಾಡುವುದಕ್ಕೆ ಅನುಭವ ಇದ್ದವರು ಪ್ರಸಿದ್ಧ ಹೋಟೆಲ್‌ಗೆ ಬೇಕಾಗಿದ್ದಾರೆ
Call : 81475 47421

**ಆತಿಥ್ಯ ರೆಸ್ಟೋರೆಂಟ್**
ಬಾಳೆ ಎಲೆಯ ಊಟ, ಹೋಳಿಗೆ, ರೊಟ್ಟಿ ಚಪಾತಿ, ರೈಸ್ ಭೋಜನ
ಶುಚಿ - ರುಚಿ - ದರ
Catering service available
Call : 08192-200404
Mob : 95131 93031

**ಬೇಕಾಗಿದ್ದಾರೆ**
ಅನುಭವವುಳ್ಳ ಯುವತಿಯರು ಬಟ್ಟೆ ಅಂಗಡಿ ಕೆಲಸಕ್ಕೆ ಜಾಕಿ ಶೋಮ್‌ಗೆ ಬೇಕಾಗಿದ್ದಾರೆ. ದರ್ಶನ್ ಆರ್ಕೇಡ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ. ಸಂಪರ್ಕಿಸಿ :
08192 224842
ಸಮಯ : 11Am to 6 Pm ಬರುವಾಗ ದಯವಿಟ್ಟು ಪೋಟೋ ಬಯೋಡೇಟಾ ತನ್ನಿ

**ಬೇಕಾಗಿದ್ದಾರೆ**
ಪುರುಷರು ಮತ್ತು ಮಹಿಳೆಯರು ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ರಾತ್ರಿ ಸಮಯದಲ್ಲಿ ಕೆಲಸಕ್ಕೆ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
ಶ್ರೀ ರವಿ ಪೆಟ್ರೋಲ್ ಬಂಕ್, ಹರಿಹರ.
91138 94614

**ಅಡುಗೆಗೆ ಮಹಿಳೆ ಬೇಕು**
ಬಟ್ಟೆ ಅಂಗಡಿಯಲ್ಲಿ ಕೆಲಸಗಾರರಿಗೆ ಅಡುಗೆ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ.
90367-34919

**ಸೈಟು ಕೊಳ್ಳಲು ಬೇಕಾಗಿರುತ್ತದೆ**
@ ದಾವಣಗೆರೆ, ಎಂಸಿಸಿ., ಎಸ್.ಎಸ್. ಲೇಔಟ್, ಕೆ.ಬಿ. ಬಡಾವಣೆ, 30x50, 30x45 ಅಳತೆಯ ಪೂರ್ವ ದಿಕ್ಕಿನ ಸೈಟ್
ಶರ್ಮಾ : 63608 66997

**ನುರಿತ ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ**
ರಾಜು ಪ್ರಿಂಟರ್ಸ್
ಶಿವಪ್ಪಯ್ಯ ರಸ್ತೆ, ದಾವಣಗೆರೆ.
99640 28818

**ಕಮರ್ಷಿಯಲ್ ಅಥವಾ ಇಂಡಸ್ಟ್ರಿಯಲ್ ಸೈಟುಗಳು ಮಾರಾಟಕ್ಕಿವೆ**
ಸೋನಾಲಿಕ ಟ್ರ್ಯಾಕ್ಟರ್ ಷೋರೂಮ್ ಹಿಂಭಾಗ, 40x68 ಅಳತೆಯ 2 ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ : 97424 34049

**ತಕ್ಷಣ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
94816 72542
ರಾಜ್ ಹಂಸ್ ಕಲೆಕ್ಷನ್, ಚಾಮರಾಜಪೇಟೆ, ದಾವಣಗೆರೆ.

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಜಮೀನು ಮಾರಾಟಕ್ಕಿದೆ**
ಸೋಕ್ಕೆ 16 ಎಕರೆ 4 ಗುಂಟೆ ಜಮೀನು ಮಾರಾಟಕ್ಕಿದೆ, ಬಳ್ಳಕಟ್ಟೆ 6 ಎಕರೆ 20 ಗುಂಟೆ ಇದೆ, NH-4ಗೆ 2 ಎಕರೆ ಇದೆ, ಕಲ್ಪನಹಳ್ಳಿ. ಏಜೆಂಟರು S. ಯಲ್ಲೋಜಿರಾವ್
97418 11694

**ಸನ್ನಿಧಿ ಟ್ರೇಡಿಂಗ್ ಕೋ**
ಎಪಿಎಂಸಿ 'ಇ' ಬ್ಲಾಕ್, ದಾವಣಗೆರೆ
ನಮ್ಮಲ್ಲಿ ಹೋಲ್ ಸೇಲ್ ದರದಲ್ಲಿ ಉತ್ತಮ ದಿನಸಿ ಮತ್ತು ಮಸಾಲಾ ಪದಾರ್ಥಗಳು ದೊರೆಯುತ್ತವೆ. ವಿಚಾರಿಸಿ :
89045 80039
73493 91298

**ಮನೆ ಬಾಡಿಗೆಗೆ ಇದೆ (ಸಸ್ಯಹಾರಿಗಳಿಗೆ ಮಾತ್ರ)**
ಗ್ರೌಂಡ್ ಫ್ಲೋರ್, 30x40 ಅಳತೆಯ 2 BHK ಪಶ್ಚಿಮ ದಿಕ್ಕು, # 361/67, 'ಬಿ' ಬ್ಲಾಕ್, ಜಯನಗರ, ದಾವಣಗೆರೆ.
ಫೋ. : 94488 43914

**SITE WANTED**
40×60 MCC B Block. Purva facing urgently Dvg. 2BHK,1BHK Anjaneya Extn. and MCC B Block for rent. contact
86180 30217

**ಮಳಿಗೆ ಬಾಡಿಗೆಗೆ ಇದೆ**
(ಹದಡಿ ರಸ್ತೆ, ತರಳಬಾಳು ಬಡಾವಣೆ) ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತದ ಎದುರು, ನಮ್ಮೂರು ತಿಂಡಿ ಹೋಟೆಲ್ ಎದುರು, 2050 ಚ.ಅ.
96863 96992

**ಬೇಕಾಗಿದ್ದಾರೆ**
ದಾವಣಗೆರೆಯಲ್ಲಿನ ಹೋಲ್‌ಸೇಲ್, ಮೆಡಿಕಲ್ ಫಾರ್ಮದಲ್ಲಿ ಕೆಲಸ ಮಾಡಲು ಸ್ವಂತ ದ್ವಿಚಕ್ರ ವಾಹನವುಳ್ಳ ಅನುಭವಿ ಹುಡುಗರು ಬೇಕಾಗಿದ್ದಾರೆ (ಪಿಯುಸಿ ಪಾಸ್ ಅಥವಾ ಫೇಲ್) ಸಂಪರ್ಕಿಸಿ :
63615 41418

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
10ನೇ ಲಕ್ಕಿ ಡ್ರಾ ನಂಬರ್
385
ರಾಘವೇಂದ್ರ
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**ಮನೆ ಮಾರಾಟಕ್ಕೆ/ಲೀಸ್/ಬಾಡಿಗೆಗೆ ಇದೆ**
ರಂಗನಾಥ ಬಡಾವಣೆ, 7ನೇ ಕ್ರಾಸ್‌ನಲ್ಲಿ 50x30 ರ ನೆಲಮಹಡಿಯಲ್ಲಿ 2BHK, ಮೊದಲನೇ ಮಹಡಿಯಲ್ಲಿ 2 ಬೆಡ್ ರೂಂನ 2 ಮನೆ ವಾಸ್ತು ಪ್ರಕಾರವಿದ್ದು ಉತ್ತರ ಪೂರ್ವ ದಿಕ್ಕಿನದಾಗಿದ್ದು, ಬೋರ್‌ವೆಲ್ ಮುನ್ಸಿಪಲ್ ನೀರಿನ ಸೌಕರ್ಯ ಇದೆ.
99642 22777

**ಸೈಟು ಮಾರಾಟಕ್ಕಿದೆ**
30x38 ಪಶ್ಚಿಮ ದಿಕ್ಕು, ತ್ರಿಶೂಲ್ ಟಾಕೀಸ್ ಹತ್ತಿರ, ಇಂಡಿಯನ್ ಗ್ಯಾಸ್ ಪಕ್ಕ, ಕಿರವಾಡಿ ಲೇಔಟ್, ದಾವಣಗೆರೆ. ಸಂಪರ್ಕಿಸಿ :
91644 57911

**ಶ್ರೀ ಸಿದ್ದೇಶ್ವರ ಡೆಕೋರೇಷನ್ & ಕೇಟರಿಂಗ್**
ಮದುವೆ ಡೆಕೋರೇಷನ್‌ಗಳನ್ನು 50,000 ರೂ.ಗಳಿಗೆ ಮಾಡಲಾಗುವುದು.
ಕರಣ್ ಎ.ಎನ್., ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.
96068 50128

**AVAILABLE**
Function Hall for Meetings, Conference, Party Celebrations, Youtube Recordings, Yoga, Meditations with lift and ample Parking. Contact :
98806 86882

**WANTED**
Required Male Office Assistant
ANDANUR CHITS (R)
Ram & Co. Circle, Davanagere.

**ಸೈಟು ಮಾರಾಟಕ್ಕಿವೆ**
1) ಬನಶಂಕರಿ ಬಡಾವಣೆ 30x50 ಪೂರ್ವ, 30x32 ಪಶ್ಚಿಮ, 30x40 ಪಶ್ಚಿಮ, 2) ಡಾಲರ್ಸ್ ಕಾಲೋನಿ 30x40, 30x50, 40x60 (ಉತ್ತರ) 3) ವಿವೇಕಾನಂದ ಬಡಾವಣೆ 40x60 ಪಶ್ಚಿಮ, 4) ಆಂಜನೇಯ ಬಡಾವಣೆ 50x60 (ಪೂರ್ವ-ದಕ್ಷಿಣ) ಕಾರ್ನರ್
95385 65909

**ತಕ್ಷಣ ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ಹಾಸಿಗೆ ಹಿಡಿದಿರುವ ವಯಸ್ಸಾದ ಹೆಣ್ಣು ಮಗಳನ್ನು ನೋಡಿಕೊಂಡು ಮನೆ ಅಡುಗೆ ಮಾಡುವ ಹೆಣ್ಣು ಮಕ್ಕಳು ತಕ್ಷಣ ಬೇಕಾಗಿದ್ದಾರೆ, ಕೆಲಸದ ವೇಳೆ ಬೆಳಿಗ್ಗೆ 8.30 ರಿಂದ ಸಂಜೆ 7 ಗಂಟೆಯ ವರೆಗೆ ಸಂಬಳ ತಿಂಗಳಿಗೆ 8000/- ರೂಗಳು, ಇಷ್ಟವಿದ್ದವರು ತಕ್ಷಣ ಸಂಪರ್ಕಿಸಿ :
94496 79324

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ವಿದ್ಯುತ್ ಸಮಸ್ಯೆಗೆ ಪರಿಹಾರ**
ನಮ್ಮಲ್ಲಿ ಎಲ್ಲಾ ತರಹದ UPS ಬ್ಯಾಟರಿ, RO ಫಿಲ್ಟರ್ ಮತ್ತು ಸೋಲಾರ್ ಸೇಲ್ಸ್ ಮತ್ತು ಸರ್ವೀಸ್ ಮಾಡಲಾಗುವುದು. ಸಂಪರ್ಕಿಸಿ.
ಪೀಸ್ ಎಂಟರ್‌ಪ್ರೈಸಸ್
ಬಕ್ಕೇಶ್ವರ ಹೈಸ್ಕೂಲ್ ಎದುರು, ನಿಜಲಿಂಗಪ್ಪ ಲೇಔಟ್, ದಾವಣಗೆರೆ.
83100 42490
99013 18277, 98801 56667

**ಬೇಕಾಗಿದ್ದಾರೆ**
ಬಿಲ್ಡಿಂಗ್‌ನಲ್ಲಿ ಎಲೆಕ್ಟ್ರಿಕಲ್ / ವೈರಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ. ಆಸಕ್ತರು ಸಂಪರ್ಕಿಸಿ.
99167 01303

**LEARN C, PYTHON, HTML**
Computer Languages Now at Reasonable Price. Contact :
73381 43236
Raksha Alok - M.tech in Computer Science

**DULL IN MATHS**
JUNIOR ABACUS 1std to 3rd std
VEDIC MATHS 4th std to 10th std
Behind Thimmareddy school, Dollars Colony
97390 66956

**ಸಂಗೀತಾಸಕ್ತರಿಗೆ ಸುವರ್ಣ ಅವಕಾಶ**
ಭಕ್ತಿಗೀತೆ, ಭಾವಗೀತೆ, ಇನ್ನೂ ಹಲವು ಶೈಲಿಯ ಗೀತೆಗಳನ್ನು ಕಲಿಯಿರಿ. ಸಂಪರ್ಕಿಸಿ :
73381 43236
ರಕ್ಷ ಅಲೋಕ್ - ಹಿಂದೂಸ್ತಾನಿ ಸಂಗೀತ ಶಿಕ್ಷಕರು

**Bussiness Opportunity**
Without Investment Work Part Time Earn 50000/- Per Month, Education : SSLC above, Age : 30 Years to 70 Years, Contact :
99009 19091

**ಮನೆ ಲೀಸ್/ಬಾಡಿಗೆಗೆ ಇದೆ**
ಕುವೆಂಪು ನಗರ ಬಾಪೂಜಿ ಸ್ಕೂಲ್ ಹತ್ತಿರ 6ನೇ ಕ್ರಾಸ್‌ನಲ್ಲಿ ದಕ್ಷಿಣ ದಿಕ್ಕಿನ 2ನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ, ಬೋರ್‌ವೆಲ್ / ಮುನ್ಸಿಪಲ್ ನೀರಿನ ಸೌಕರ್ಯವಿದೆ.
99642 22777

**IIT FOUNDATION MATHS**
From 5th, 6th, 7th Classes
Bruit Academy
Nijalingappa Badavane
M : 97390 66956

**SECURITY GUARD ಬೇಕಾಗಿದ್ದಾರೆ**
Hospital & Granet Showroom, Hadadi Road & P.B. Road,
9740977785

**WANTED**
Banking Sector Tele Caller (Female Only)
Qualification : Any Degree.
90715 55081
Interview Time - 11AM

**WANTED**
Banking Sector field officer (Male Only)
Qualification : Any Degree.
90715 55081
Interview Time - 11AM

**ಓಂ ಸಾಯಿ ಬಲಮುರಿ ಗಣಪತಿ ಜ್ಯೋತಿಷ್ಯಾಲಯ**
ಪಂಡಿತ್ ಬಿ.ಎಸ್.ರಾವ್
ಇವರು ನುಡಿದಂತೆ ನಡೆಯುವರು. ಸಮಸ್ಯೆಗಳಾದ ವ್ಯಾಪಾರದಲ್ಲಿ ಲಾಭ-ನಷ್ಟ, ವಿದ್ಯೆ, ಉದ್ಯೋಗ, ಲೈಂಗಿಕ, ಸ್ತ್ರೀ ಪುರುಷ ವಶೀಕರಣ, ಶತ್ರುನಾಶ, ಮನೆಯಲ್ಲಿ ಅಶಾಂತಿ, ಗಂಡ-ಹೆಂಡತಿ ಕಲಹ. ನಿಮ್ಮ ಯಾವುದೇ ಸಮಸ್ಯೆಗೆ ದೂರವಾಣಿ ಮುಖಾಂತರ 2 ದಿನಗಳಲ್ಲಿ ಪರಿಹಾರ.ಇಂದೇ ಕರೆ ಮಾಡಿ. ನಿಮ್ಮ ನಂಬಿಕೆಗೆ ಇಲ್ಲಿ ಮೋಸವಿಲ್ಲ.
ಮೊ : 99807 70791

**ಮೇಕ್ ಓವರ್ ಕ್ಲಾಸ್**
ಒಂದು ತಿಂಗಳ ತರಬೇತಿ.. ಮೇಕಪ್, ಸ್ಯಾರೀ ಡ್ರೇಪಿಂಗ್ ಮತ್ತು ಹೇರ್ ಸ್ಟೈಲ್.ಮೇಕಪ್ ಕಲಿಕೆಗೆ ಪ್ರಾಡಕ್ಟ್ಸ್ ಗಳನ್ನು ಕೊಡಲಾಗುತ್ತದೆ. ಎರಡು portfolio ಫೋಟೋ ಶೂಟ್‌ಗಳು ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.
ಸಂಪರ್ಕಿಸಿ: Glamorous Studio Girija make up artist
94817 76305

## ಶ್ರೀ ಸೋಮೇಶ್ವರ ವಿದ್ಯಾಲಯದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ



ದಾವಣಗೆರೆ, ಸೆ.10- ನಗರದ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಒಂದಾದ ಶ್ರೀ ಸೋಮೇಶ್ವರ ವಿದ್ಯಾಲಯದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ನಡೆಯಿತು. ಪೋಷಕರ ಅಮೋಘ ಸಹಕಾರದೊಂದಿಗೆ ನಡೆದ ಈ ಕಾರ್ಯಕ್ರಮದಲ್ಲಿ ಮುದ್ದಾದ ಮಕ್ಕಳು ರಾಧೆ, ಕೃಷ್ಣನ ವೇಷದೊಂದಿಗೆ ಶಾಲೆಗೆ ಆಗಮಿಸಿ ಎಲ್ಲರ ಗಮನ ಸೆಳೆದರು.

ರಾಧೆಯಾದ ವಿದ್ಯಾರ್ಥಿನಿಯರಿಗೆ ಕೃಷ್ಣನ ಪಾತ್ರದಲ್ಲಿ ಬಂದ ವಿದ್ಯಾರ್ಥಿಗಳು ಸಾಥ್ ನೀಡಿದರು. ಶ್ರೀ ಕೃಷ್ಣನ ಹಲವು ಹಾಡುಗಳಿಗೆ ಹೆಜ್ಜೆ ಹಾಕುವ ಮೂಲಕ ಶ್ರೀ ಕೃಷ್ಣನನ್ನು ಸ್ಮರಿಸಿದರು. ಪುಟ್ಟ ಪಟಾಣಿಗಳು ಶ್ರೀ ಕೃಷ್ಣನಂತೆ ಕಂಗೊಳಿಸುವ ಮೂಲಕ ಶಾಲಾ ವಾತಾವರಣವೇ ಹಬ್ಬದಂತೆ ಮಾರ್ಪಟ್ಟಿತ್ತು. ಹಿರಿಯ ಶಿಕ್ಷಕಿ ಶ್ರೀಮತಿ ರೂಪರಾಣಿ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಪೋಷಕರಾದ ಶ್ರೀಮತಿ ಮಮತಾ ಹಾಗೂ ಶ್ರೀಮತಿ ಮಂಗಳ ಗೌರಿ ಆಗಮಿಸಿದ್ದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಸಂಸ್ಥಾಪಕರು ಹಾಗು ಗೌರವ ಕಾರ್ಯದರ್ಶಿ ಕೆ.ಎಂ ಸುರೇಶ್, ಪ್ರಾಂಶುಪಾಲರಾದ ಶ್ರೀಮತಿ ಪ್ರಭಾವತಿ, ಆಡಳಿತಾಧಿಕಾರಿ ಹರೀಶ್ ಬಾಬು, ಮುಖ್ಯೋಪಾಧ್ಯಾಯ ಪ್ರಕಾಶ್, ಶ್ರೀಮತಿ ಗಾಯತ್ರಿ, ಶ್ರೀಮತಿ ಮಾಲಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸ್ವಾತಂತ್ರ್ಯ ಪೂರ್ವದಲ್ಲಿಯೇ ಶಿಕ್ಷಣಕ್ಕೆ ಪ್ರೋತ್ಸಾಹಿಸಿದ್ದ ಅನ್ನದಾನ ಶ್ರೀಗಳು



ದಾವಣಗೆರೆ, ಸೆ.10- ಸ್ವಾತಂತ್ರ್ಯ ಪೂರ್ವದಲ್ಲಿಯೇ ಶಿಕ್ಷಣ ಸಂಸ್ಥೆ ಆರಂಭಿಸಿದ್ದ ಶ್ರೀ ಗುರು ಅನ್ನದಾನ ಮಹಾಶಿವಯೋಗಿಗಳವರು ಕೆಳಸ್ತರದ ಜನರಿಗೆ ಅನ್ನ ದಾಸೋಹದ ಮೂಲಕ ಬರೀ ಅನ್ನ ನೀಡಿದರೆ, ಹೊಟ್ಟೆ ಬಿಟ್ಕೊಂಡ್ ಓಡಾಡುತ್ತಾರೆ. ಹೀಗಾಗಿ, ಅವರನ್ನು ಶಿಕ್ಷಣವಂತರನ್ನಾಗಿ ಮಾಡಬೇಕು. ಜ್ಞಾನ ಕೊಡಬೇಕೆಂಬ ಉದ್ದೇಶದಿಂದ ಮನೆ, ಮನೆಗೆ ಹೋಗಿ ಮಠದ ಶಿಕ್ಷಣ ಸಂಸ್ಥೆಗಳಿಗೆ ಬಂದು ಶಿಕ್ಷಣ ಪಡೆಯುವಂತೆ ಪ್ರೋತ್ಸಾಹ ನೀಡಿದ್ದರು ಎಂದು ಹಾಲಕೆರೆ ಶ್ರೀ ಅನ್ನದಾನೇಶ್ವರ ಸಂಸ್ಥಾನ ಮಠದ ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿ ಸ್ಮರಿಸಿದರು.

ನಗರದ ಶ್ರೀ ಅನ್ನದಾನೇಶ್ವರ ಶಾಖಾ ಮಠದಲ್ಲಿ ಇಂದು ನಡೆದ ಲಿಂ. ಶ್ರೀ ಗುರು ಅನ್ನದಾನ ಮಹಾಶಿವಯೋಗಿಗಳವರ 46ನೇ ಪುಣ್ಯಾರಾಧನೆ, ಲಿಂ. ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳವರ ದ್ವಿತೀಯ ವರ್ಷದ ಪುಣ್ಯಾರಾಧನೆ ಶಿವಾನುಭವ ಸಂಪದ ಹಾಗೂ 501 ಮುತ್ತೈದೆಯರಿಗೆ ಉಡಿತುಂಬುವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ರಸಗೊಬ್ಬರಕ್ಕೆ ಸಬ್ಸಿಡಿ ನೀಡುತ್ತಿರುವ ಸರ್ಕಾರ ನೀತಿಗಳು ಸರಿಯಾಗಿಲ್ಲ. ಇದೇ ರೀತಿ ರಸಗೊಬ್ಬರಗಳನ್ನು ಬಳಕೆ ಮಾಡಿದರೆ, ಮುಂದಿನ 20 ವರ್ಷಗಳಲ್ಲಿ ಮನೆಗೊಬ್ಬ ಕ್ಯಾನ್ಸರ್ ಪೀಡಿತ ಸಿಗುತ್ತಾನೆ. ರಾಸಯನಿಕ ಗೊಬ್ಬರಗಳಿಗೆ ಸಬ್ಸಿಡಿ ನೀಡುವ ಬದಲು, ಜನರಿಗೆ ಉತ್ತಮ ಆರೋಗ್ಯ ನೀಡುವ ಸಾವಯವ ಕೃಷಿಗೆ ಪ್ರೋತ್ಸಾಹ ನೀಡುವತ್ತ ಸರ್ಕಾರ ಗಮನ ಹರಿಸಬೇಕು ಎಂದು ಆಗ್ರಹಿಸಿದರು.

ಹಸಿರು ಕ್ರಾಂತಿಯ ಪರಿಣಾಮ ಹೆಚ್ಚಾಗಿ ರಸಗೊಬ್ಬರ ಬಳಕೆ ಮಾಡಿ, ಬೆಳೆಯುವ ಉತ್ಪನ್ನ ಸೇವಿಸುತ್ತಿರುವ ಪರಿಣಾಮ ದೇಹದಲ್ಲಿ ಕಸುವು ಉಳಿಯಲ್ಲ. ಹೀಗಾಗಿ, ಭಾರತದಲ್ಲಿ ಕ್ಯಾನ್ಸರ್ ಪೀಡಿತರ ಸಂಖ್ಯೆ ಹೆಚ್ಚಾಗಿದೆ. ಅತಿಯಾದ ರಾಸಾಯನಿಕ ಬಳಕೆಯಿಂದ ಭೂಮಿ ಬಂಜರಾಗಿದೆ. ಇದನ್ನು ಅರಿತ ಡಾ. ಅಭಿನವ ಅನ್ನದಾನ ಶ್ರೀಗಳು 2013ರಲ್ಲಿ ಹಾಲ್ಕೆರೆಯಿಂದ ಉಳುವಿಯವರೆಗೂ 213 ಚಕ್ಕಡಿ ಗಾಡಿಗಳನ್ನು ಕಟ್ಟಿಕೊಂಡು ಐದು ಸಾವಿರ ರೈತರನ್ನು ಕರೆದುಕೊಂಡು ಹಳ್ಳಿ, ಹಳ್ಳಿಗೆ ಭೇಟಿ ನೀಡಿ ಸಾವಯವ ಕೃಷಿ, ಜೈವಿಕ ಇಂಧನದ ಬಗ್ಗೆ ಜಾಗೃತಿ ಮೂಡಿಸಿದ್ದರು. ಈ ನಿಟ್ಟಿನಲ್ಲಿ ನಾವು ನಮ್ಮ 7 ಮಠಗಳಿಂದ ಸಾವಯವ ಕೃಷಿ ಬಗ್ಗೆ ಜಾಗೃತಿ ಮೂಡಿಸಲಾಗುವುದು ಎಂದರು.

ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಅನ್ನದಾನೇಶ್ವರ ಸಂಸ್ಥಾನ ಮಠವು ಜಾತಿ, ಮತ ಮತ್ತು ಪಂಥಗಳ ಮೇರೆ ಮೀರಿ ಅಧ್ಯಾತ್ಮಿಕ ನೆಲೆಗಟ್ಟಿನಲ್ಲಿ ಸಾರ್ವಜನಿಕರನ್ನು ಉತ್ತುಂಗ ಸ್ಥಿತಿಗೆ ಕೊಂಡ್ಡೊಯ್ಯುವ ಕೆಲಸ ಮಾಡುತ್ತಿದೆ. ಯಾವುದೇ ಸರ್ಕಾರ ಮಾಡದ ಕೆಲಸವನ್ನು ವೀರಶೈವ-ಲಿಂಗಾಯತ ಮಠಗಳು ಮಾಡುತ್ತಿವೆ. ಆದರೆ, ಈಗಿನ ಕೆಲ ಭಕ್ತರು ಮಠಗಳನ್ನು ಮಠಗಳಾಗಿ ಉಳಿಯಲು ಬಿಡದೇ ಅಧಿಕಾರದ ಲಾಲಸೆಯಿಂದ ಮಠದ ವ್ಯವಸ್ಥೆಯನ್ನೇ ಹಾಳು ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ 501 ಮುತ್ತೈದೆಯರಿಗೆ ಉಡಿ ತುಂಬಲಾಯಿತು. ಅಕ್ಕಿ ವರ್ತಕ ಎ.ಬಿ. ಚಂದ್ರಶೇಖರ್ ಅವರಿಗೆ ವಾಣಿಜ್ಯ ಸಿರಿ, ಇಎಸ್ಐ ಆಸ್ಪತ್ರೆ ಅಧೀಕ್ಷಕ ಡಾ. ಬಸವನಗೌಡ ಅವರಿಗೆ ವೈದ್ಯ ರತ್ನ, ವಕೀಲ ಎಂ.ವಿ. ರೇವಣಸಿದ್ದಯ್ಯ ಅವರಿಗೆ ಕಾಯಕ ರತ್ನ, ವೈದ್ಯ ಡಾ. ಮಂಜುನಾಥ ದೊಗ್ಗಳ್ಳಿ ಅವರಿಗೆ ಸಮಾಜಸೇವಾ ಚಿಂತಾಮಣಿ, ಎಂ.ಎಸ್. ಶರಣಪ್ಪ ಅವರಿಗೆ ಕಾಯಕ ಸೌರಭ, ಜಂಬಿಗಿ ರಾಧೇಶ್ ಅವರಿಗೆ ಗಣಕ ಶ್ರೇಷ್ಠ, ಶಿವಪುತ್ರಪ್ಪ ಹೆರೂರ್ ನಾಗನೂರ್ ಅವರಿಗೆ ಕಾಯಕ ಜೀವಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಮುಖ್ಯ ಸಚೇತಕ ಡಾ. ಎ.ಎಚ್. ಶಿವಯೋಗಿಸ್ವಾಮಿ, ಸಿದ್ಧಗಂಗಾ ವಿದ್ಯಾಸಂಸ್ಥೆ ಮುಖ್ಯಸ್ಥರಾದ ಜಸ್ಟಿನ್ ಡಿ'ಸೌಜಾ, ಎನ್. ಅಡಿವೆಪ್ಪ, ವೀರಪ್ಪ ಎಂ. ಬಾವಿ, ಸುಜಾತ, ಬಿ.ವಿ. ತನುಜ, ಎನ್.ಎ. ಗಿರೀಶ್, ಮತ್ತಿತರರಿದ್ದರು.

# ವಿದ್ಯಾಭ್ಯಾಸಕ್ಕೆ ಒತ್ತು ಕೊಟ್ಟು ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಗಳಾಗಬೇಕು



### ಜಿಲ್ಲಾ ಮಾದಿಗ ದಂಡೋರ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಶ್ರೀ ಬಸವಮೂರ್ತಿ ಮಾದರ ಚೆನ್ನಯ್ಯ ಸ್ವಾಮೀಜಿ ಹಿತ ನುಡಿ

ದಾವಣಗೆರೆ, ಸೆ.10- ಸಮಾಜದ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ಕೊಡುವುದರ ಮೂಲಕ ಸಮಾಜ ದಲ್ಲಿ ಗೌರವಾನ್ವಿತ ವ್ಯಕ್ತಿಗಳಾಗಬೇಕೆಂದರು. ಇಂದಿನ ದಿನಮಾನಗಳಲ್ಲಿ ವಿದ್ಯಾವಂತರಾಗದಿದ್ದರೆ, ಮುಂದಿನ ದಿನಗಳಲ್ಲಿ ನಿಮ್ಮ ಬದುಕು ತುಂಬಾ ಕಷ್ಟದ ದಿನಗಳನ್ನು ಎದುರಿಸಬೇಕಾಗುತ್ತದೆ ಎಂದು ಚಿತ್ರದುರ್ಗದ ಶ್ರೀ ಬಸವಮೂರ್ತಿ ಮಾದರ ಚೆನ್ನಯ್ಯ ಸ್ವಾಮೀಜಿ ಹೇಳಿದರು.

ಜಿಲ್ಲಾ ಮಾದಿಗ ದಂಡೋರ ವತಿಯಿಂದ ರೋಟರಿ ಬಾಲ ಭವನದಲ್ಲಿ ಮಾದಿಗ ಸಮಾಜದ 2022-23 ನೇ ಸಾಲಿನಲ್ಲಿ ಎಸ್ಎಸ್ಎಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇಕಡ 75ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾವಂತರಾಗಿ ಜವಾಬ್ದಾರಿಯುತ ಸ್ಥಾನದಲ್ಲಿದ್ದರೆ, ಸಮಾಜದಲ್ಲಿ ನಿಮಗೆ ಎಲ್ಲಾ ರೀತಿಯ ಗೌರವ ಪ್ರಾಪ್ತಿಯಾಗುತ್ತದೆ. ಅಸ್ಪೃಶ್ಯತೆ ಮತ್ತು ಕಂದಾಚಾರ ತಾವಾಗಿಯೇ ನಿರ್ಮೂಲನೆಯಾಗುತ್ತವೆ. ವಿದ್ಯಾರ್ಥಿಗಳ ತಂದೆ-ತಾಯಿಗಳು ತಮ್ಮ ದುಡಿಮೆಯ ಹಣವನ್ನು ದುಂದುವೆಚ್ಚ ಮಾಡದೆ, ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಒತ್ತು ಕೊಡುವುದರೊಂದಿಗೆ ಅವರನ್ನು ಆದರ್ಶ ವ್ಯಕ್ತಿಗಳನ್ನಾಗಿ ಮಾಡಬೇಕೆಂದು ತಿಳಿಸಿದರು. ಸಮಾಜ ಅನುಭವಿಸುತ್ತಿರುವ ಅಸ್ಪೃಶ್ಯತೆಯನ್ನು ತೊಡೆದು ಹಾಕಬೇಕೆಂದರೆ ನಿಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವಂತೆ ಕರೆ ನೀಡಿದರು.

ಸಮಾರಂಭದ ಉದ್ಘಾಟನೆಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಆಶಾ ಬಸವರಾಜಪ್ಪ ನೆರವೇರಿಸಿದರು. ಇನ್‌ಸೈಟ್ಸ್ ಐಎಎಸ್ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್ ಮಾತನಾಡಿ, ತುಳಿತಕ್ಕೆ ಒಳಗಾದ ಸಮಾಜದ ಮಕ್ಕಳಿಗೆ ತಮ್ಮ ಸಂಸ್ಥೆಯ ವತಿಯಿಂದ ಅವರ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಲು ಮುಂದಿನ ದಿನಗಳಲ್ಲಿ ಚಿಂತನೆ ನಡೆಸುತ್ತೇವೆ ಎಂದರು. ಸರ್ಕಾರದ ಯೋಜನೆಗಳನ್ನು ಪಡೆದುಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳುವಂತೆ ಕರೆ ನೀಡಿದರು.

ನಂತರ ಮಾತನಾಡಿದ ಕಾಂಗ್ರೆಸ್ ಮುಖಂಡ ಜಸ್ಟಿನ್ ಜಯಕುಮಾರ್, ಇಂದಿನ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಒತ್ತು ಕೊಡುವುದನ್ನು ಬಿಟ್ಟು ಮೊಬೈಲ್‌ಗಳಿಗೆ ಹೆಚ್ಚಿನ ಸಮಯ ಕೊಡುತ್ತಿರುವುದು ಆತಂಕದ ವಿಷಯವಾಗಿದೆ. ಆದ್ದರಿಂದ ಮಕ್ಕಳ ಮೇಲೆ ಪೋಷಕರು ಗಮನ ಹರಿಸುವಂತೆ ತಿಳಿಸಿದರು.

ಪ್ರಶಸ್ತಿ ಪತ್ರವನ್ನು ಶಾಸಕ ಕೆ.ಎಸ್. ಬಸವಂತಪ್ಪ ವಿತರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಹೆಚ್.ಸಿ. ಗುಡ್ಡಪ್ಪ ವಹಿಸಿದ್ದರು. ಸಭೆಯಲ್ಲಿ ಜಗಳೂರು ತಾಲ್ಲೂಕು ಅಧ್ಯಕ್ಷ ಜಿ.ಹೆಚ್.ಮಹೇಶ್, ಈಚಘಟ್ಟ ಕೆಂಚಪ್ಪ, ಕಣವಿಹಳ್ಳಿ ಮಂಜುನಾಥ್, ಜಿ.ಹೆಚ್. ತಮ್ಮಣ್ಣ, ಬಿ. ಎಸ್. ಕೃಷ್ಣಮೂರ್ತಿ, ಹೆಚ್. ಚಿದಾನಂದಪ್ಪ, ಗಂಗನಕಟ್ಟೆ ಹನುಮಂತಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಫಣಿಯಾಪುರದಲ್ಲಿ ನಟ ಕಿಚ್ಚ ಸುದೀಪ್ ಜನ್ಮ ದಿನ ಸಂಭ್ರಮಾಚರಣೆ



ಹರಪನಹಳ್ಳಿ, ಸೆ.10- ತಾಲ್ಲೂಕಿನ ಫಣಿಯಾಪುರ ಗ್ರಾಮದಲ್ಲಿ ಕನ್ನಡ ಚಿತ್ರರಂಗದ ಹೆಸರಾಂತ ಚಲನಚಿತ್ರ ನಟರು ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಬಹುಭಾಷಾ ನಟ ಆಗಿ ನಟಿಸಿ ಕನ್ನಡ ಚಿತ್ರರಂಗಕ್ಕೆ ಕೀರ್ತಿ ತಂದುಕೊಟ್ಟ ಅಭಿನಯ ಚಕ್ರವರ್ತಿ ಕಿಚ್ಚ ಸುದೀಪ್ ಜನ್ಮ ದಿನವನ್ನು ಗ್ರಾಮದ ಯುವಕರು ಕೇಕ್ ಕಟ್ ಮಾಡಿ, ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಫಣಿಯಾಪುರ ಲಿಂಗರಾಜ್, ಹನುಮಂತಪ್ಪ, ಸುರೇಶ್, ಬಂಡೆ ನಾಗರಾಜ್, ರಾಜ, ಸುನೀಲ್, ಮಂಜು, ನಾಗರಾಜ್, ರಾಜ, ಚಂದ್ರು, ಹನುಮಂತ, ಅಭಿ, ದೇವೇಂದ್ರ, ಮಂಜಪ್ಪ, ಇತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಶ್ರೀ ಮಡಿವಾಳ ಮಾಚಿದೇವರ ಶ್ರಾವಣ ಮಾಸದ ಸ್ಮರಣೋತ್ಸವ

ಜಿಲ್ಲಾ ಶ್ರೀ ಮಡಿವಾಳ ಮಾಚಿದೇವ ಸಂಘ, ಮಹಿಳಾ ಸಂಘ ಹಾಗೂ ಮಡಿಕಟ್ಟೆ ಸಮಿತಿ ವತಿಯಿಂದ ಶ್ರೀ ಮಡಿವಾಳ ಮಾಚಿದೇವರ ಶ್ರಾವಣ ಮಾಸದ ಸ್ಮರಣೋತ್ಸವ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 7 ರಿಂದ ಶ್ರೀ ಮಾಚಿದೇವ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ.

ಬೆಳಿಗ್ಗೆ 7:05ರಿಂದ ರುದ್ರಾಭಿಷೇಕ ಹಾಗೂ ವಿಶೇಷ ಅಲಂಕಾರದೊಂದಿಗೆ ಪೂಜೆ ನೆರವೇರಿಸಲಾಗುತ್ತದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಗುತ್ತದೆ. ಬೆಳಿಗ್ಗೆ 11:30ಕ್ಕೆ ನೆರವೇರುವ ಸಭಾ ಕಾರ್ಯಕ್ರಮದ ಸಾನಿಧ್ಯವನ್ನು ಚಿತ್ರದುರ್ಗ ಮಾಚಿದೇವ ಮಹಾಮಠದ ಡಾ. ಬಸವ ಮಾಚೀದೇವ ಸ್ವಾಮೀಜಿ, ಮೂಢ ಬಿದರೆಯ ಶ್ರೀ ಮುಕ್ತಾನಂದ ಸ್ವಾಮೀಜಿ, ಶ್ರೀ ಜಡೇಸಿದ್ದ ಯೋಗೀಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ ಹಾಗೂ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎಂ. ನಾಗೇಂದ್ರಪ್ಪ ವಹಿಸಲಿದ್ದಾರೆ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಶಾಮನೂರು ಶಿವಶಂಕರಪ್ಪ, ಶಾಸಕ ಕೆ. ಎಸ್. ಬಸವಂತಪ್ಪ, ಮಾಜಿ ಶಾಸಕ ಎಸ್.ಎ. ರವೀಂದ್ರನಾಥ್, ಮೇಯರ್ ವಿನಾಯಕ ಪೈಲ್ವಾನ್ ಮತ್ತಿತರೆ ಗಣ್ಯರು ಆಗಮಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಹರಪನಹಳ್ಳಿ ಪುರಸಭೆ ಮಾಜಿ ಅಧ್ಯಕ್ಷ ಹೆಚ್.ಎಂ. ಅಶೋಕ ಹರಾಳ್, ಪಾಲಿಕೆ ಸದಸ್ಯ ಪ್ರಸನ್ನಕುಮಾರ್, ಎ. ನಾಗರಾಜ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ಸೇಂಟ್‌ಜಾನ್ಸ್‌ನಲ್ಲಿ ಗುರುಗಳಿಗೆ ಸನ್ಮಾನ




ದಾವಣಗೆರೆ, ಸೆ. 10 - ಗುರು ಎಂದರೆ ಕೇವಲ ವ್ಯಕ್ತಿಯಲ್ಲ ಅದೊಂದು ಶಕ್ತಿ ಎಂಬಂತೆ ನಗರದ ಸೇಂಟ್‌ಜಾನ್ಸ್ ಆಂಗ್ಲ ಮಾಧ್ಯಮ ಶಾಲಾ ಆವರಣದಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.

ಮುಖ್ಯ ಆತಿಥ್ಯವನ್ನು ವಹಿಸಿದ್ದ ಕೈಗಾರಿಕೋದ್ಯಮಿ ಬಿ. ಬದ್ರಿನಾಥ್ ಮಾತನಾಡುತ್ತ ಶಿಕ್ಷಕರ ಪ್ರಾಮುಖ್ಯತೆಯ ಬಗ್ಗೆ ಮಕ್ಕಳಿಗೆ ತಿಳಿಸಿದರು.

ಶಿಕ್ಷಕರ ದಿನಾಚರಣೆಯ ವೇದಿಕೆಯ ಅಧ್ಯಕ್ಷೀಯ ಸ್ಥಾನವನ್ನು ಅಲಂಕರಿಸಿದ್ದ ಸೇಂಟ್ ಜಾನ್ಸ್ ವಿದ್ಯಾಸಂಸ್ಥೆಯ ಕಾರ್ಯದರ್ಶಿಗಳೂ, ಖಾಸಗಿ ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷರೂ ಆದ ಟಿ.ಎಂ. ಉಮಾಪತಯ್ಯ ಮಾತನಾಡಿ, ರೈತ, ಸೈನಿಕ, ಶಿಕ್ಷಕ ನಮ್ಮ ದೇಶದ ಬೆನ್ನೆಲುಬು, ಇಸ್ರೋ ವಿಜ್ಞಾನಿಗಳು ಚಂದ್ರಯಾನ-3ರಲ್ಲಿ ಯಶಸ್ಸನ್ನು ಕಂಡಿದ್ದು, ಯಶಸ್ವಿ ವಿಜ್ಞಾನಿಗಳನ್ನು ರೂಪಿಸಿರುವವರು ಶಿಕ್ಷಕರೇ. ಆದ್ದರಿಂದ ತಾವೆಲ್ಲರೂ ಶಿಕ್ಕಕರ ಜ್ಞಾನ ಸಂಪತ್ತನ್ನು ಸದುಪಯೋಗಪಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ದೀಪ ಜಗತ್ತನ್ನು ಬೆಳಗಿಸಿದರೆ, ಶಿಕ್ಷಕ ವ್ಯಕ್ತಿಯ ವ್ಯಕ್ತಿತ್ವವನ್ನು ಬೆಳಗಿಸುತ್ತಾನೆ ಎಂಬಂತೆ ಶಾಲಾ ವಿದ್ಯಾರ್ಥಿ ಸಂಘದ ವಿದ್ಯಾರ್ಥಿಗಳು ಶಿಕ್ಷಕರ ದಿನಾಚರಣೆಯ ಅಂಗವಾಗಿ ಶಿಕ್ಷಕರಿಗೆ ವಿವಿಧ ಕ್ರೀಡೆಗಳನ್ನು ಆಯೋಜಿಸಿದ್ದರು.

ಸೇಂಟ್‌ಜಾನ್ಸ್ ವಿದ್ಯಾ ಸಂಸ್ಥೆಯ ಬೋಧಕ ಹಾಗೂ ಬೋಧಕೇತರ ವರ್ಗದವರಿಗೆ ನೆನಪಿನ ಕಾಣಿಕೆಯನ್ನು ನೀಡಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಹೆಚ್. ಅನಿಲ್ ಕುಮಾರ್, ಖಜಾಂಚಿ ಪ್ರವೀಣ್ ಹುಲ್ಲುಮನೆ, ಪ್ರಾಂಶುಪಾಲರಾದ ಆರ್. ಸಯ್ಯದ್ ಆರಿಫ್ ಹಾಗೂ ಪ್ರೀತಾ ಟಿ. ರೈ, ಉಪಪ್ರಾಂಶುಪಾಲರಾದ ನೇತ್ರಾವತಿ ಹಾಗೂ ಇತರರು ಉಪಸ್ಥಿತರಿದ್ದರು.

## ಇಂಪೀರಿಯಲ್ ಶಾಲೆ: ಕೃಷ್ಣ ಜನ್ಮಾಷ್ಟಮಿ



ದಾವಣಗೆರೆ, ಸೆ. 10 - ನಗರದ ಇಂಪೀರಿಯಲ್ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ವಿದ್ಯಾರ್ಥಿಗಳು ಶ್ರೀ ಕೃಷ್ಣ ಹಾಗೂ ರಾಧೆಯ ವೇಷ ತೊಟ್ಟು ಸಂಭ್ರಮಿಸಿದರು. ಚೇತನ ವಿದ್ಯಾಸಂಸ್ಥೆಯ ಅಧ್ಯಕ್ಷ ಕೆ.ಎನ್. ಓಂಕಾರಪ್ಪ, ಮುಖ್ಯ ಶಿಕ್ಷಕರು, ಸಿಬ್ಬಂದಿ ವರ್ಗದವರು, ಪೋಷಕರು ಹಾಜರಿದ್ದರು.

## ನಗರಕ್ಕೆ ಇಂದು ನಟ ರಕ್ಷಿತ್ ಶೆಟ್ಟಿ



ಕನ್ನಡ ಚಿತ್ರರಂಗದ ಹೆಸರಾಂತ ನಟ, ನಿರ್ಮಾಪಕ ರಕ್ಷಿತ್ ಶೆಟ್ಟಿ ಮತ್ತು ಚಿತ್ರ ತಂಡವು ಮೂವಿ ಟೈಮ್ಸ್ ಹಾಗೂ ಗೀತಾಂಜಲಿ ಚಿತ್ರಮಂದಿರಕ್ಕೆ ಇಂದು ಆಗಮಿಸಲಿದೆ.

ಈಚೆಗೆ ಬಿಡುಗಡೆಯಾದ ಹೇಮಂತರಾವ್ ನಿರ್ದೇಶನದ 'ಸಪ್ತ ಸಾಗರದಾಚೆ ಎಲ್ಲೋ' ಚಿತ್ರದ ವಿಜಯಯಾತ್ರೆಗಾಗಿ ಚಿತ್ರ ತಂಡ ಇಂದು ಬೆಳಿಗ್ಗೆ 10 ಗಂಟೆಗೆ ನಾಯಕ ರಕ್ಷಿತ್ ಶೆಟ್ಟಿ, ನಾಯಕ ನಟಿ ರುಕ್ಮಿಣಿ ವಸಂತ್, ನಿರ್ದೇಶಕ ಹೇಮಂತರಾವ್ ಮತ್ತು ತಂಡ ನಗರಕ್ಕೆ ಆಗಮಿಸಲಿದ್ದು, ಚಿತ್ರ ಕಲಾಭಿಮಾನಿಗಳು ಆಗಮಿಸಲು ಪಿ.ಹೆಚ್. ಮಂಜುನಾಥ್ ಕೋರಿದ್ದಾರೆ.

## ಬಳ್ಳಾರಿ ಷಣ್ಮುಖಪ್ಪ ನಿಧನಕ್ಕೆ ಎಸ್ಸೆಸ್, ಎಸ್ಸೆಸ್ಸೆಂ ಸಂತಾಪ

ದಾವಣಗೆರೆ, ಸೆ. 10 - ಕುರುಬ ಸಮಾಜದ ಹಿರಿಯ ಮುಖಂಡ ಬಳ್ಳಾರಿ ಷಣ್ಮುಖಪ್ಪ ಅವರ ನಿಧನಕ್ಕೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ, ಪ್ರಧಾನ ಕಾರ್ಯದರ್ಶಿ ಕೆ. ದಿನೇಶ್ ಶೆಟ್ಟಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಬೀರಲಿಂಗೇಶ್ವರ ದೇವಸ್ಥಾನ ಸಮಿತಿ, ಶಿಬಾರದ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನ ಸಮಿತಿ, ಬೀರೇಶ್ವರ ವಿದ್ಯಾವರ್ಧಕ ಸಂಘ, ಕನಕ ಸಹಕಾರ ಸಂಘ ಸೇರಿದಂತೆ ಹಲವು ಸಂಘ-ಸಂಸ್ಥೆಗಳಲ್ಲಿ ಗುರುತಿಸಿಕೊಂಡಿದ್ದ ಷಣ್ಮುಖಪ್ಪ ಅವರ ಸಾಮಾಜಿಕ ಸೇವೆಯನ್ನು ಎಸ್ಸೆಸ್ ಮೆಲಕು ಹಾಕಿದ್ದಾರೆ.

## ನಗರದಲ್ಲಿ ಇಂದು ಕೃತಿ ಲೋಕಾರ್ಪಣೆ

ಆರ್.ಪಿ. ಪಾಟೀಲ್ ವಿರಚಿತ 'ಯಶಸ್ಸಿನ ಅಧ್ಯಾತ್ಮಿಕತೆ ಸಂಹಿತೆಗಳು' ಕೃತಿಯು ಲೋಕಾರ್ಪಣೆ ಸಮಾರಂಭವು ಇಂದು ಸಂಜೆ 7 ಗಂಟೆಗೆ ಬಸವ ಕೇಂದ್ರ, ವಿರಕ್ತಮಠದಲ್ಲಿ ನಡೆಯಲಿದೆ.

ಸಾನ್ನಿಧ್ಯವನ್ನು ಶ್ರೀ ಬಸವಪ್ರಭು ಸ್ವಾಮೀಜಿ ವಹಿಸುವರು. ಮುಖ್ಯ ಅತಿಥಿಗಳಾಗಿ ಬಿ.ಎನ್. ಮಲ್ಲೇಶ್ ಆಗಮಿಸುವರು. ಕೃತಿ ಮತ್ತು ಕೃತಿಕಾರರ ಪರಿಚಯವನ್ನು ಜಗನ್ನಾಥ ನಾಡಿಗೇರ ನಡೆಸಿಕೊಡುವರು. ಅರುಣ, ಅಭಿಷೇಕ್ ವಚನ ಗಾಯನ ನಡೆಸಿಕೊಡುವರು.

## ಉದ್ಯೋಗ ಶಿಬಿರ

ದಾವಣಗೆರೆ, ಸೆ. 10 - ತೋಳಹುಣಸೆ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಹಳೇ ತೋಳಹುಣಸೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಮಟ್ಟದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಮೊಬೈಲ್ ರಿಪೇರಿ, ಮೋಟಾರ್ ವೈಂಡಿಂಗ್ ತರಬೇತಿ, ಫೋಟೋಗ್ರಫಿ, ವಿಡಿಯೋಗ್ರಫಿ ತರಬೇತಿಗೆ ಇದೇ 15ರಂದು ನೇರ ಸಂದರ್ಶನ ಏರ್ಪಡಿಸಲಾಗಿದೆ.

ಈ ತರಬೇತಿಗೆ 19 ರಿಂದ 44 ವಯೋಮಿತಿಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಇದೇ ದಿನಾಂಕ 15ರ ಒಳಗಾಗಿ ತರಬೇತಿ ಸಂಸ್ಥೆಗೆ ನೇರವಾಗಿ ಅಥವಾ ದೂರವಾಣಿ ಮುಖಾಂತರ ಹೆಸರು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ : 7975139332, 7019980484, 9964 111314, 9538395817.

## ಓದುಗರ ಪತ್ರ

### ಪಡಿತರ ತಿದ್ದುಪಡಿ ಸರ್ವರ್ ಸಮಸ್ಯೆ ನಿವಾರಿಸಿ

ಮಾನ್ಯರೇ,

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ಅನ್ನಭಾಗ್ಯ, ಗೃಹಲಕ್ಷ್ಮಿ ಮುಂತಾದ ಯೋಜನೆಗಳಿಗೆ ಪಡಿತರ ಚೀಟಿ ಕಡ್ಡಾಯ ಮಾಡಿರುವುದರಿಂದ, ಸೆಪ್ಟೆಂಬರ್ ಒಂದರಿಂದ ಹತ್ತರವರೆಗೆ ಪಡಿತರ ಚೀಟಿ ತಿದ್ದುಪಡಿ ಮಾಡಲು ಅವಕಾಶ ನೀಡಲಾಗಿದೆ.

ಆದರೆ ತಿದ್ದುಪಡಿ ಪ್ರಾರಂಭವಾದ ದಿನದಿಂದಲೂ, ಸರ್ವರ್ ಸಮಸ್ಯೆ ತುಂಬಾ ಕಾಡುತ್ತಿದೆ. ಯಾವುದೇ ಸೇವಾ ಸಿಂಧು ಕೇಂದ್ರಕ್ಕೆ ಹೋದರೂ, ಸರ್ವರ್ ಇಲ್ಲ ಸರ್ ತಡವಾಗುತ್ತೆ, ದಿನಕ್ಕೆ 2 ಅಥವಾ 3 ತಿದ್ದುಪಡಿ ಮಾಡಿದರೆ ಹೆಚ್ಚಾಯಿತು ಎನ್ನುತ್ತಾರೆ.

5-10 ನಿಮಿಷದಲ್ಲಿ ಮುಗಿಯುವಂತಹ ತಿದ್ದುಪಡಿ ಕೆಲಸ, ಸರ್ವರ್ ಸಮಸ್ಯೆಯಿಂದ ಒಂದೂವರೆಯಿಂದ ಎರಡು ಗಂಟೆಯವರೆಗೂ ಹಿಡಿಯುತ್ತದೆ. ಕೆಲವೊಮ್ಮೆ ಅದೂ ಇಲ್ಲ ಎನ್ನುತ್ತಾರೆ.

ಜನಸಾಮಾನ್ಯರು ಕೆಲಸಕ್ಕೆ ರಜೆ ಹಾಕಿ ದಿನಪೂರ್ತಿ ಸೇವಾ ಕೇಂದ್ರಗಳಲ್ಲಿಯೇ ಕಾಯುವಂತಹ ಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಪಡಿತರ ತಿದ್ದುಪಡಿಗೆ ನೀಡಿರುವ ಗಡುವನ್ನು ವಿಸ್ತರಿಸುವ ಜೊತೆಗೆ ಸರ್ವರ್ ಸಮಸ್ಯೆಯನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಬೇಕಾಗಿದೆ.

- ಮುರುಗೇಶ ಡಿ., ದಾವಣಗೆರೆ.

# ಬಸವಣ್ಣನವರ ವಚನಗಳಿಂದ ಸರ್ವರಿಗೂ ಮಾರ್ಗದರ್ಶನ

### ತಾಲ್ಲೂಕು ಕಸಾಪ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಶಿಕ್ಷಕ - ಸಾಹಿತಿ ಕೆರೆಬಿಳಚಿಯ ಅಕ್ರಮುಲ್ಲಾ ಶರೀಫ್



ದಾವಣಗೆರೆ, ಸೆ. 10- 12ನೇ ಶತಮಾನದಲ್ಲಿ ಜನ್ಮ ತಾಳಿದ ಬಸವಣ್ಣನವರು ಸಕಲ ಜನತೆಯ ಸಲುವಾಗಿ ಕೈಗೊಂಡ ಕಾರ್ಯಗಳು 800 ವರ್ಷ ಕಳೆದರೂ ಇಂದಿಗೂ ನಿತ್ಯ ನೂತನವಾಗಿವೆ. ಬಸವಣ್ಣನವರ ವಿಶಿಷ್ಟ ಕಾಣಿಕೆ ಏನೆಂದರೆ ಬಸವಣ್ಣನವರು 1500 ವಚನಗಳನ್ನು ರಚಿಸಿದ್ದಾರೆ. ಬಸವಣ್ಣನವರ ವಚನಗಳಿಂದ ಸರ್ವರಿಗೂ ಮಾರ್ಗದರ್ಶನವಿದೆ ಎಂದು ಕರೆಕಟ್ಟೆಯ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಹಾಗೂ ಸಾಹಿತಿ ಕೆರೆಬಿಳಚಿಯ ಅಕ್ರಮುಲ್ಲಾ ಶರೀಫ್ ತಿಳಿಸಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ನಿಟುವಳ್ಳಿಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಹಿರಿಯ ನಾಗರಿಕರ ಸಹಾಯವಾಣಿ ಇವರ ಸಂಯುಕ್ತಾಶ್ರಯದಲ್ಲಿ ಶಾಲೆಯಲ್ಲಿ ನಿನ್ನೆ ನಡೆದ ಶಾಲಾ - ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಬಸವಣ್ಣನವರ ಜೀವನ ಹಾಗೂ ವಚನಗಳು ವಿಷಯ ಕುರಿತು ಅವರು ಮಾತನಾಡಿದರು.

'ಇವನಾರವ ಇವನಾರವ ಎಂದೆನಿಸಯ್ಯ... ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ, ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲ' ಹಾಗೂ 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ಈ ತರಹದ ಅನೇಕ ವಚನಗಳ ಕುರಿತು ಮಕ್ಕಳಿಗೆ ಎಳೆ ಎಳೆಯಾಗಿ ಅರ್ಥೈಸಿದರು.

ಕಸಾಪ ನಿರ್ದೇಶಕ ಎಂ. ಷಡಕ್ಷರಪ್ಪ ಬೇತೂರು ಪ್ರಾಸ್ತಾವಿಕವಾಗಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ನಡೆದು ಬಂದ ದಾರಿ ಹಾಗೂ ದತ್ತಿ ದಾನಿಗಳನ್ನು ಸ್ಮರಿಸಿದರು.

ಮುಖ್ಯ ಅತಿಥಿಯಾಗಿ ಎ.ಕೆ. ಫೌಂಡೇಷನ್ ನ ಸಂಸ್ಥಾಪಕ ಕೆ.ಬಿ. ಕೊಟ್ರೇಶ್ ಮಾತನಾಡಿ, ತಾಲ್ಲೂಕು ಕ.ಸಾ.ಪ ಶಾಲಾ - ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ ಹಾಗೂ ದತ್ತಿ ಉಪನ್ಯಾಸದಂತ ಕಾರ್ಯಕ್ರಮಗಳೊಂದಿಗೆ ಒಳ್ಳೆಯ ಕೆಲಸ ಮಾಡುತ್ತಿದೆ ಎಂದು ತಿಳಿಸುತ್ತಾ, ಜ್ಞಾನಪೀಠ ಪ್ರಶಸ್ತಿ ಪಡೆದ ಸಾಹಿತಿಗಳನ್ನು ಸ್ಮರಿಸುತ್ತಾ, ಅವರಂತೆ ಉತ್ತಮ ವಿದ್ಯಾಭ್ಯಾಸ ಮಾಡಿ ವಿದ್ಯಾರ್ಥಿಗಳು ಉತ್ತಮ ಸಾಹಿತಿಗಳಾಗಿ, ನಾಡು ನುಡಿಗೆ ಒಳ್ಳೆಯ ಹೆಸರು ತನ್ನಿ ಎಂದರು.

ಪ್ರೌಢಶಾಲೆ ಮುಖ್ಯೋಪಾಧ್ಯಾಯ ಎಂ. ಸುರೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾಥಮಿಕ ಶಾಲಾ ಶಿಕ್ಷಕ ಎ.ಕೆ. ಚಂದ್ರಪ್ಪ ಕಾರ್ಯಕ್ರಮ ಉದ್ಘಾಟಿಸಿದರು.

ಭಾರತ ಸೇವಾದಳದ ಟಿ.ನಾಗರಾಜ್, ಕೆ.ಟಿ.ಜಯಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದಾವಣಗೆರೆ ಜಿಲ್ಲಾ ಉತ್ತಮ ಶಿಕ್ಷಕಿಯಾಗಿ ಆಯ್ಕೆಯಾದ ಶ್ರೀರಾಮ ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಶ್ರೀಮತಿ ಎ.ಎಲ್. ನಾಗವೇಣಿ ಅವರನ್ನು ದಾವಣಗೆರೆ ತಾಲ್ಲೂಕು ಕಸಾಪ ಹಾಗೂ ಎ.ಕೆ. ಫೌಂಡೇಷನ್ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು.


ಹಿರಿಯ ಶಿಕ್ಷಕ ಸಿ. ಅಜಯ್ ನಾರಾಯಣ್ ಪ್ರಾರ್ಥಿಸಿದರು. ಶಿಕ್ಷಕಿ ಎ.ಎಲ್. ನಾಗವೇಣಿ ಕಾರ್ಯಕ್ರಮ ನಿರೂಪಿಸಿದರು. ತಾಲ್ಲೂಕು ಕಸಾಪ ನಿರ್ದೇಶಕರಾದ ಶ್ರೀಮತಿ ಸೌಭಾಗ್ಯ ನಾಗರಾಜ್ ವಂದಿಸಿದರು.


## ಕಾಣೆಯಾಗಿದ್ದಾರೆ



**ನಾಗರಾಜ** ತಂದೆ ರುದ್ರಪ್ಪ, 54 ವರ್ಷ, ಲಿಂಗಾಯತ ಜನಾಂಗ, ವಾಸ ಗುಡಾಳ್ ಗ್ರಾಮ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ. ಇವರು ದಿನಾಂಕ 01.08.2003ರಂದು ಗುಡಾಳ್ ಗ್ರಾಮದಿಂದ ಕಾಣೆಯಾಗಿರುತ್ತಾರೆ. ಈ ಕುರಿತು ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣಾ ನಂ. 304/2023ರಲ್ಲಿ ಕೇಸ್ ದಾಖಲಾಗಿದೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಗ್ರಾಮಾಂತರ ಪೊಲೀಸ್ ಠಾಣೆ ಅಥವಾ ದೂ. ಸಂ. **08192 262555, ಮೊ : 94808 03256 ಗೆ ಸಂಪರ್ಕಿಸಿ.**

## ಆನೆಕೊಂಡದಲ್ಲಿ ಇಂದು ಜಾತ್ರೆ, ಕಾರಣಿಕೋತ್ಸವ



ಶ್ರೀ ಕ್ಷೇತ್ರ ಆನೆಕೊಂಡದ ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಮಾಸದ ಕಡೇ ಸೋಮವಾರವಾದ ಇಂದು ಸಂಜೆ 4 ಗಂಟೆಗೆ ಶ್ರೀ ಬಸವೇಶ್ವರ ಮತ್ತು ನೀಲಾನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ಹಾಗೂ ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಿ ಮತ್ತು ಸುತ್ತಮುತ್ತಲಿನ ದೇವರುಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆ ನಡೆದು ನಂತರ ಸಂಜೆ 6 ಗಂಟೆಗೆ ಶ್ರೀ ಬಸವೇಶ್ವರ ಸ್ವಾಮಿಯ ಜಾತ್ರೋತ್ಸವ ಮತ್ತು ಕಾರಣಿ ಕೋತ್ಸವ ಜರುಗಲಿದೆ ಎಂದು ದೇವಸ್ಥಾನದ ಕನ್ವೀನರ್ ಗೌಡ್ರು ಅಜ್ಜಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಸಮಾವೇಶ

ರಾಮಕೃಷ್ಣ ಮಿಷನ್ ವತಿಯಿಂದ 130 ನೇ ವರ್ಷದ ಚಿಕಾಗೋ ಉಪನ್ಯಾಸದ ಸಂಸ್ಮರಣಾ ದಿನ ಹಾಗೂ ರಾಮಕೃಷ್ಣ ಮಿಷನ್ನಿನ 125ನೇ ವಾರ್ಷಿಕೋತ್ಸವದ ಅಂಗವಾಗಿ ಯುವ ಸಮಾವೇಶ ಕಾರ್ಯಕ್ರಮವು ಇಂದು ಬೆಳಿಗ್ಗೆ 9 ಕ್ಕೆ ದಾವಣಗೆರೆ-ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಸಮುದಾಯ ಭವನದಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ರಾಮಕೃಷ್ಣ ಮಿಷನ್ ವ್ಯವಸ್ಥಾಪಕ ಸಮಿತಿ ಅಧ್ಯಕ್ಷ ಆರ್.ಆರ್. ರಮೇಶ ಬಾಬು ಪಾಲ್ಗೊಳ್ಳಲಿದ್ದಾರೆ ಎಂದು ಸಮಿತಿ ಕಾರ್ಯದರ್ಶಿ ಸ್ವಾಮಿ ತ್ಯಾಗೀಶ್ವರಾನಂದ ತಿಳಿಸಿದ್ದಾರೆ.


**Jewellery Show Room**
**Furniture & Accessories For SAle**
Sales Counter, Gold Testing Machine, Trays, Alcons, Reavolving Chair Etc for Sale
**Shantala**
Chamarajpet, Davanagere
M: 96861 95323, 96861 95326



**ರಜಾ ಸೂಚನೆ**
ಪರ್ಯುಷಣ್ ಹಬ್ಬದ ಪ್ರಯುಕ್ತ
ದಿನಾಂಕ 12-09-2023ರ ಮಂಗಳವಾರ
ನಮ್ಮ ಅಂಗಡಿಗಳು ರಜಾ ಇರುತ್ತದೆ.
ಮಾನ್ಯ ನಮ್ಮೆಲ್ಲಾ ಗ್ರಾಹಕರು ಸಹಕರಿಸಬೇಕಾಗಿ ವಿನಂತಿ
**ಶಾಂತಲಾ ವೆಡ್ಡಿಂಗ್ ಮಾಲ್**
ಚಾಮರಾಜಪೇಟೆ, ದಾವಣಗೆರೆ-577001
**ಶಾಂತಲಾ ಬ್ರಾಂಚ್**
ಡೆಂಟಲ್ ಕಾಲೇಜು ರೋಡ್, ದಾವಣಗೆರೆ


|| ಶ್ರೀ ಲಕ್ಷ್ಮಿವೆಂಕಟೇಶ್ವರ ಸ್ವಾಮಿ ಪ್ರಸನ್ನ ||

### ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಹೊಳಲ್ಕೆರೆ ತಾಲ್ಲೂಕು,
ತಾಳ್ಯ ಹೋಬಳಿ ಶಿವಗಂಗಾ ಗ್ರಾಮದ ವಾಸಿ
ಬಂದ್ರಹಳ್ಳೇರ ಶ್ರೀಮತಿ ಬಸಮ್ಮ ಮತ್ತು
ಲಿಂ. ಶ್ರೀ ಚಂದ್ರಪ್ಪನವರು ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 06.09.2023ನೇ ಬುಧವಾರ
ರಾತ್ರಿ 01.25 ಕ್ಕೆ ನಮ್ಮ ಮಗನಾದ
ಶ್ರೀ ಬಿ.ಸಿ. ಬಸವರಾಜ್ ಇವರ ಧರ್ಮಪತ್ನಿ

**ಶರಣೆ ಮಂಗಳ**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 11.09.2023ನೇ ಸೋಮವಾರ ಬೆಳಿಗ್ಗೆ 10.30 ಗಂಟೆಗೆ
ಶಿವಗಂಗಾ ಗ್ರಾಮದ ಲಿಂಗೈಕ್ಯರ ಸ್ವಗೃಹದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಶ್ರೀಮತಿ ಬಸಮ್ಮ ಮತ್ತು ಮಕ್ಕಳು,
ಶ್ರೀ ಬಸವರಾಜ್ ಮತ್ತು ಮಕ್ಕಳು, ಮೊಮ್ಮಕ್ಕಳು
ಬಂದ್ರಹಳ್ಳಿ ವಂಶಸ್ಥರು, ಶಿವಗಂಗಾ, ಗುಂಟನೂರು ವಂಶಸ್ಥರು, ಶಾಮನೂರು
ಹಾಗೂ ಬಂಧು-ಮಿತ್ರರು. ಮೊ : 99020 27637

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 10.09.2023ರಂದು ನಿಧನರಾದ ಪಿ.ಬಿ. ರಸ್ತೆಯ ಶ್ರೀ ಬೀರೇಶ್ವರ ಜಾಗದ ಅಭಿವೃದ್ಧಿ ಟ್ರಸ್ಟ್‌ನ ಖಜಾಂಚಿಗಳೂ, ಕನಕ ಪಟ್ಟಣ ಸಹಕಾರಿ ಬ್ಯಾಂಕ್ ಮಾಜಿ ಉಪಾಧ್ಯಕ್ಷರೂ, ನಗರ ಕುರುಬರ ಸಂಘದ ಕಾರ್ಯದರ್ಶಿಗಳೂ, ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನ (ಶಿಬಾರ) ಟ್ರಸ್ಟ್ ಸದಸ್ಯರಾದ

**ಶ್ರೀ ಬಳ್ಳಾರಿ ಷಣ್ಮುಖಪ್ಪ**

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

✦ ಎಸ್.ಟಿ. ಅರವಿಂದ್ ಹಾಲೇಕಲ್ ✦ ಎಸ್.ಟಿ. ರಾಜೇಶ್
✦ ಮಂಜುನಾಥ ಇಟ್ಟಿಗುಡಿ ✦ ಬಿ. ಲಿಂಗರಾಜ್ ✦ ಯೋಗೀಶ್
✦ ವೈ. ಮಂಜುನಾಥ ✦ ಆನಂದ ಶಿವಮೊಗ್ಗ ✦ ಗುಡದಪ್ಪ ✦ ಬಸವರಾಜ್

### ಶ್ರೀ ಕ್ಷೇತ್ರ ಆನೆಕೊಂಡದ ಶ್ರೀ ಬಸವೇಶ್ವರಸ್ವಾಮಿ ಕಾರಣಿಕ ಮಹೋತ್ಸವಕ್ಕೆ

ಸರ್ವ ಭಕ್ತಾದಿಗಳಿಗೆ ಭಕ್ತಿಪೂರ್ವಕ ಸುಸ್ವಾಗತ

ದಿನಾಂಕ 11.09.2023 ರ ಶ್ರಾವಣ ಮಾಸದ ಕಡೇ ಸೋಮವಾರ ನಡೆಯುವ ಶ್ರೀ ಬಸವೇಶ್ವರಸ್ವಾಮಿ ಮತ್ತು ಶ್ರೀ ಆಂಜನೇಯ ಸ್ವಾಮಿ ವಿವಿಧ ದೇವರುಗಳನ್ನೊಡಗೂಡಿ ನಡೆಯುವ ಕಾರಣಿಕ ಮಹೋತ್ಸವಕ್ಕೆ ಶುಭಾಶಯಗಳು.



ಶ್ರೀಗಂಧಾ'ಸ್ ಆನೆಕೊಂಡ ಹನುಮಂತಪ್ಪ ಕನ್‌ವೆನ್ಷನ್ ಹಾಲ್



ಶ್ರೀ ಬಸವೇಶ್ವರ ಸ್ವಾಮಿ
ಆನೆಕೊಂಡ, ದಾವಣಗೆರೆ.


**ಶ್ರೀಗಂಧಾ'ಸ್ ಆನೆಕೊಂಡ ಹನುಮಂತಪ್ಪ ಕನ್‌ವೆನ್ಷನ್ ಹಾಲ್ A/c**
ಓಷನ್ ಪಾರ್ಕ್ ಫ್ಯಾಮಿಲಿ ಗಾರ್ಡನ್ ರೆಸ್ಟೋರೆಂಟ್ ಆವರಣ,
ಡಿ.ಸಿ. ಕಚೇರಿ ಹತ್ತಿರ, ಜಿ.ಎಂ.ಐ.ಟಿ. ಕಾಲೇಜು ಮುಂಭಾಗ, ಪಿ.ಬಿ. ರಸ್ತೆ, ದಾವಣಗೆರೆ.
ಸುಸಜ್ಜಿತ ಮತ್ತು ಅತ್ಯಾಧುನಿಕವಾಗಿದ್ದು, ಇಲ್ಲಿ ಆರತಕ್ಷತೆ, ನಾಮಕರಣ, ಜನ್ಮದಿನ ಸಮಾರಂಭ, ಸಂಭ್ರಮಾಚರಣೆ, ಸಭೆ - ಸಮಾರಂಭಗಳಿಗೆ ಅನುಕೂಲವಾಗಿರುವ AC ಹಾಲ್ ಬಾಡಿಗೆಗೆ ಸಿಗುತ್ತದೆ. ಪ್ರತ್ಯೇಕ ಅಡುಗೆ ಕೋಣೆ ವ್ಯವಸ್ಥೆ ಇದೆ. ಸಂಪರ್ಕಿಸಿ: 94485 89727 70196 74592


### ಭಾವಪೂರ್ಣ ಶ್ರದ್ಧಾಂಜಲಿ ಸಭೆ



ಶ್ರೀ ಬಳ್ಳಾರಿ ಷಣ್ಮುಖಪ್ಪನವರು
ನಿಧನ : 10-09-2023 (ಕುರುಬರ ಕೇರಿ), ದಾವಣಗೆರೆ

ದಾವಣಗೆರೆ ಜಿಲ್ಲಾ ಕುರುಬರ ಸಂಘದ
ಹಿರಿಯ ಉಪಾಧ್ಯಕ್ಷರಾದ
**ಶ್ರೀ ಬಳ್ಳಾರಿ ಷಣ್ಮುಖಪ್ಪನವರು**
ದಿನಾಂಕ 10-09-2023 ರಂದು ಸ್ವರ್ಗಸ್ಥರಾಗಿರುತ್ತಾರೆ.
ಅವರ ಭಾವಪೂರ್ಣ ಶ್ರದ್ಧಾಂಜಲಿ
ಕಾರ್ಯಕ್ರಮವನ್ನು ಸಂಘದ ಖಜಾಂಚಿಗಳಾದ
ಶ್ರೀ ಬಿ.ಹೆಚ್. ಪರಶುರಾಮಪ್ಪನವರ
ಅಧ್ಯಕ್ಷತೆಯಲ್ಲಿ ದಿನಾಂಕ 11-09-2023ರ ಸೋಮವಾರ
ಬೆಳಿಗ್ಗೆ 10-00 ಗಂಟೆಗೆ ಶ್ರೀ ಬೀರೇಶ್ವರ ದೇವಸ್ಥಾನದ
ಹತ್ತಿರ ಹಮ್ಮಿಕೊಳ್ಳಲಾಗಿದೆ.
ಆದ ಕಾರಣ ಸಮಾಜದ ಎಲ್ಲಾ ಸಂಘಟನೆಗಳ
ಪದಾಧಿಕಾರಿಗಳು, ಸಂಘದ ನಿರ್ದೇಶಕರುಗಳು
ಮತ್ತು ಸಮಾಜ ಬಾಂಧವರು ಹಾಗೂ
ಅಭಿಮಾನಿ ಬಾಂಧವರು ಈ ಕಾರ್ಯಕ್ರಮದಲ್ಲಿ
ಭಾಗವಹಿಸಬೇಕೆಂದು ಕೋರುತ್ತೇನೆ.

**ಲೋಕಿಕೆರೆ ಸಿದ್ದಪ್ಪ,** ಪ್ರಧಾನ ಕಾರ್ಯದರ್ಶಿಗಳು,
**ದಾವಣಗೆರೆ ಜಿಲ್ಲಾ ಕುರುಬರ ಸಂಘ (ರಿ.)**

### ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಕ್ಷೇತ್ರ ಶಿಬಾರ ಮೈಲಾರಲಿಂಗೇಶ್ವರ ದೇವಸ್ಥಾನ ಟ್ರಸ್ಟ್‌ನ ಗೌರವಾಧ್ಯಕ್ಷರಾದ

**ಶ್ರೀ ಬಳ್ಳಾರಿ ಷಣ್ಮುಖಪ್ಪನವರು**



ದಿನಾಂಕ 10.09.2023ರಂದು ನಿಧನರಾಗಿದ್ದು ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಅವರ ಆತ್ಮಕ್ಕೆ ಚಿರಶಾಂತಿ ಕರುಣಿಸಲಿ ಮತ್ತು ಅವರ ಅಗಲಿಕೆಯ ದುಃಖವನ್ನು
ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ದಯಪಾಲಿಸಲಿ
ಎಂದು ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯಲ್ಲಿ ಪ್ರಾರ್ಥಿಸುತ್ತೇವೆ.

**ಶ್ರೀ ಕ್ಷೇತ್ರ ಶಿಬಾರ ಮೈಲಾರಲಿಂಗೇಶ್ವರ ದೇವಸ್ಥಾನ ಟ್ರಸ್ಟ್**
ಕೊಂಡಜ್ಜಿ ರಸ್ತೆ, ದಾವಣಗೆರೆ.

।। ಶ್ರೀ ಆನೆಕೊಂಡ ಬಸವೇಶ್ವರ ಪ್ರಸನ್ನ ।।

### ಶ್ರೀ ಕ್ಷೇತ್ರ ಆನೆಕೊಂಡದ ಶ್ರೀ ಬಸವೇಶ್ವರಸ್ವಾಮಿ ಕಾರಣಿಕ ಮಹೋತ್ಸವಕ್ಕೆ

ಸರ್ವ ಭಕ್ತಾದಿಗಳಿಗೆ ಭಕ್ತಿಪೂರ್ವಕ ಸುಸ್ವಾಗತ


ಹೊಯ್ಸಳ ಕಾಲದ ಶಿಲ್ಪಕಲೆಯಿಂದ ಕೂಡಿದ ಐತಿಹಾಸಿಕ
**ಶ್ರೀ ಕ್ಷೇತ್ರ ಆನೆಕೊಂಡ ಬಸವೇಶ್ವರ ದೇವಸ್ಥಾನದಲ್ಲಿ**
ದಿನಾಂಕ 11.09.2023ರ ಶ್ರಾವಣ ಮಾಸದ ಕಡೇ ಸೋಮವಾರದಂದು
ಶ್ರೀ ಬಸವೇಶ್ವರ ಮತ್ತು ನೀಲಾನಹಳ್ಳಿ ಶ್ರೀ ಆಂಜನೇಯ ಸ್ವಾಮಿ ಮತ್ತು ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಿ ಹಾಗೂ ಸುತ್ತಮುತ್ತಲಿನ ಗ್ರಾಮದ ದೇವರಗಳನ್ನೊಳಗೂಡಿ
ಸಂಜೆ 4.00 ಗಂಟೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆ ಮೂಲಕ ಸಂಚರಿಸಿ,
ಸಂಜೆ 6.00 ಗಂಟೆಗೆ ನಡೆಯುವ
**ಕಾರಣಿಕ ಮಹೋತ್ಸವಕ್ಕೆ ಸರ್ವ ಭಕ್ತಾದಿಗಳಿಗೆ ಭಕ್ತಿಪೂರ್ವಕ ಸುಸ್ವಾಗತ**



ಸಿ. ಮಂಜುನಾಥ್



ಎನ್.ಬಿ. ಪರಮೇಶ್



ಕೆ. ಹೇಮಣ್ಣ, ಮಾಜಿ ಜಿಲ್ಲಾಧ್ಯಕ್ಷರು
ಕರ್ನಾಟಕ ರಾಜ್ಯ ಶಿಳ್ಳೇಕ್ಯಾತರ (ಕಿಳ್ಳೆಕ್ಯಾತರ) ಅಭಿವೃದ್ಧಿ ಸಂಘ (ಎಸ್.ಸಿ.). ದಾವಣಗೆರೆ.

ಮತ್ತು ಗೆಳೆಯರ ಬಳಗ ಹಾಗೂ ಆನೆಕೊಂಡ ಗ್ರಾಮಸ್ಥರು